ದಕ್ಷಿಣ ಕನ್ನಡ ಪದ್ಮಶಾಲಿ ಸಮಾಜ ಸೇವಾ ಕೂಟ (ರಿ), ಬೆಂಗಳೂರು ಪ್ರಕಟಣೆ

SHETTIGARA VAANI

# ಶೆಟ್ಟಿಗಾರ ವಾಣಿ

ಬೆಂಗಳೂರು ನಿವಾಸಿ ಕರಾವಳಿ ಮೂಲದ ಶೆಟ್ಟಿಗಾರ ಸಮಾಜದ ಮುಖವಾಣಿ

ಸಂಪುಟ: 2 ಆಗಸ್ಟ್ 2025 ಸಂಚಿಕೆ: 2 ಪುಟಗಳು: 16

**ಸಂಪಾದಕ ಮಂಡಳಿ**

ಶ್ರೀ ನಾರಾಯಣ ಶೆಟ್ಟಿಗಾರ್
ಶ್ರೀ ಮಾಧವ ಶೆಟ್ಟಿಗಾರ್, ಯು
ಶ್ರೀ ಪ್ರಕಾಶಚಂದ್ರ ಆತ್ರಾಡಿ
ಶ್ರೀ ಪ್ರಭಾಕರ ಶೆಟ್ಟಿಗಾರ್, ಎಂ
ಶ್ರೀ ಮಾಧವ ಶೆಟ್ಟಿಗಾರ್, ಶೆಟ್ಟಿಗಾಡು
ಶ್ರೀ ಸುಂದರ ಎಸ್ ಶೆಟ್ಟಿಗಾರ್, ಎಕ್ಕಾರ್
ಶ್ರೀ ದೊಂಬಯ್ಯ ಶೆಟ್ಟಿಗಾರ್
ಶ್ರೀಮತಿ ಬಾನುಮತಿ ಡಿ ಶೆಟ್ಟಿಗಾರ್
ಸಿ.ಎ. ವಿಶ್ರಾಂತ್ ಬಿ ಎಲ್
ಶ್ರೀ ಯತೀಶ್ ಎಲ್. ಶೆಟ್ಟಿಗಾರ್
ಶ್ರೀಮತಿ ಉಷಾ ಚೇತನ್

**ವಿನ್ಯಾಸ ಮತ್ತು ತಂತ್ರಜ್ಞಾನ ನೆರವು**

ಶ್ರೀ ಯಶಸ್ವಿ ಜೆ
ಶ್ರೀ ರಾಮಕೃಷ್ಣ ಸಾಲಿಕೇರಿ

**ವಿಳಾಸ**

ಶೆಟ್ಟಿಗಾರವಾಣಿ, C/o ದಕ್ಷಿಣ ಕನ್ನಡ ಪದ್ಮಶಾಲಿ ಸಮಾಜ ಸೇವಾ ಕೂಟ (ರಿ),
ನಂ.8, ಶಾಂತವೇರಿ ಗೋಪಾಲಗೌಡ ನಗರ,
4ನೇ ಅಡ್ಡ ರಸ್ತೆ, ಮೂಡಲಪಾಳ್ಯ, ಬೆಂಗಳೂರು-560072

ಮೊಬೈಲ್: 9535443311
ಇಮೇಲ್: dkpadmashalibng@gmail.com
ವೆಬ್ ಸೈಟ್: www.dkpadmashalibng.in

ಸೂಚನೆ: ಇಲ್ಲಿ ಪ್ರಕಟವಾಗುವ ಲೇಖನಗಳಲ್ಲಿ ವ್ಯಕ್ತವಾಗುವ ಅಭಿಪ್ರಾಯಗಳು ಆಯಾ ಲೇಖಕರ ವೈಯಕ್ತಿಕ ಅಭಿಪ್ರಾಯಗಳು ಮಾತ್ರ; ಪತ್ರಿಕೆಯ ಅಥವಾ ಕೂಟದ ಅಭಿಪ್ರಾಯಗಳಲ್ಲ.



AI generated image: No photo credits required

## ಬುದ್ಧಿಜೀವಿ

ಅವನೊಬ್ಬ ಸ್ವಯಂಘೋಷಿತ ಬುದ್ದಿಜೀವಿ. ತಲೆಯಲ್ಲಿ ಸ್ವಲ್ಪವೂ ಬೊಂಡು ಇಲ್ಲದವನು. ದೇಶದಲ್ಲಿ ಇತರರು ಎಸಗುವ ಕಾರ್ಯದಲ್ಲಿ ತಪ್ಪನ್ನು ಕಂಡು ಆ ಬಗ್ಗೆ ಕಾನೂನು ಕ್ರಮವನ್ನು ಆಗ್ರಹಿಸಿ ಜನತೆಗೆ ಎತ್ತಿ ತೋರಿಸುವುದೇ ಅವನ ಕಾಯಕವಾಗಿತ್ತು. ಅವನಂದು ಮೇ ತಿಂಗಳ ಬೇಗೆಯಿಂದ ದಣಿವಾರಿಸಲು ಕೃಷ್ಣಭವನವೆಂಬ ಚಿಕ್ಕ ಹೋಟೆಲಿಗೆ ನುಗ್ಗಿದ. ಆಗ ಆತನಿಗೆ ಗಲ್ಲಾಪೆಟ್ಟಿಗೆಯಲ್ಲಿ ಕುಳಿತಿದ್ದ ಹೋಟೆಲಿನ ಧನಿ ಒಬ್ಬ ಹದಿಹರೆಯದ ಸರ್ವರ್‌ನಿಗೆ ಬೈಯುವುದು ಕಾಣಿಸಿತು.

“ನೀನು ಈ ರೀತಿ ಸರ್ವ್ ಮಾಡಿದರೆ ಹೋಟೆಲ್ ಉದ್ಧಾರವಾದಂತೆ”

“ಸರಿಯಾಗಿ ಕೆಲಸ ಮಾಡಲಾಗದಿದ್ದರೆ ಯಾಕೆ ಇಲ್ಲಿಗೆ ಬರಬೇಕಿತ್ತು?”

ಇತ್ಯಾದಿಯಾಗಿಯಾಗಿ ಬೈಯುತ್ತಿದ್ದ.

ಬುದ್ಧಿಜೀವಿ ಅದನ್ನು ನೋಡಿದ. 'ಅರೆ ಬಾಲಕಾರ್ಮಿಕ! ಅವನನ್ನು ಈ ಮಾಲೀಕ ದುಡಿಸಿಕೊಳ್ಳುತ್ತಿದ್ದಾನೆ, ಜೊತೆ ಅವನನ್ನು ಶೋಷಿಸುತ್ತಿದ್ದಾನೆ. ಈ ದೌರ್ಜನ್ಯವನ್ನು ಬುದ್ಧಿಜೀವಿಯಾದ ನಾನು ಖಂಡಿಸಬೇಕು' ತತ್‌ಕ್ಷಣ ಅವನ ಬುದ್ಧಿ ಚುರುಕಾಯಿತು. ತನ್ನ ಮೊಬೈಲಲ್ಲಿ ಅಲ್ಲಿ ನಡೆಯುತ್ತಿರುವ ವಿದ್ಯಮಾನವನ್ನೆಲ್ಲಾ ರೆಕಾರ್ಡ್ ಮಾಡಲು ನಿರ್ಧರಿಸಿದ. ಸರ್ವರ್ ಬಾಲಕನನ್ನು ತನ್ನಲ್ಲಿ ನಯವಾಗಿ ಮಾತಿಗೆಳೆಸಿದ;

"ಏನಪ್ಪಾ ನಿನ್ನ ಹೆಸರು?"

"ಬಾಲಕೃಷ್ಣ"

"ನಿಂಗೆ ವಯಸ್ಸು ಎಷ್ಟು?"

"ಹದಿನೈದು!"

"ಇಲ್ಲಿ ಯಾವಾಗದಿಂದ ಕೆಲಸ ಮಾಡ್ತಿದ್ದೀಯ?"

"ಒಂದು ತಿಂಗಳಿನಿಂದ"

"ದಿನಾ ಎಷ್ಟು ಗಂಟೆ ಕೆಲಸ ಮಾಡ್ತಿ?"

"ಗಂಟೆ ಗಿಂಟೆ ಏನೂ ಇಲ್ಲ, ದುಡಿಯುದೇ ಸಾರ್."

"ನಿಂಗೆ ಸರಿಯಾಗಿ ಸಂಬಳ ಕೊಡ್ತಾರ?"

"ಸಂಬಳವಾ?" ಎಂದು ಏನೋ ಯೋಚಿಸಿ ಅಲ್ಲಿಂದ ತಪ್ಪಿಸಿಕೊಂಡು ಒಳಗೆ ಓಡಿದ. ಧನಿ ಅವನಿಗೆ ಅಲ್ಲಿಯೂ ಬೈದ "ಬರೇ ಮಾತು. ಅಧಿಕಪ್ರಸಂಗಿ!"

ಅದನ್ನು ನೋಡಿ ಬಹಳ ಸಂಭ್ರಮದಿಂದ ಬುದ್ಧಿಜೀವಿ ಅಲ್ಲಿಂದ ನೇರವಾಗಿ ಆ ನ್ಯೂಸನ್ನು ಚಾನಲೊಂದಕ್ಕೆ ತೋರಿಸಿದ. ಪೋಲೀಸರಿಗೂ ಫೋನ್ ಮಾಡಿದ. ಮಾರನೆಯ ದಿನ ಎಲ್ಲರನ್ನೂ ಅಲ್ಲಿಗೆ ಕರೆದುಕೊಂಡು ಬಂದ. ತನ್ನ ಮಹತ್ಸಾಧನೆಯನ್ನು ಜಗದಗಲ ತೋರಿಸಿ ಶಹಬ್ಬಾಸ್ ಗಿಟ್ಟಿಸಲು "ಲೈವ್ ಬ್ರೇಕಿಂಗ್ ನ್ಯೂಸ್" ಪ್ರಚಾರಕ್ಕೆ ವ್ಯವಸ್ಥೆ ಮಾಡಿಕೊಂಡು ಕೃಷ್ಣಭವನಕ್ಕೆ ನುಗ್ಗಿದ. ಆಶ್ಚರ್ಯ...! ಅರೆ!, ಅದೇ ಹುಡುಗ ಇಂದು ಗಲ್ಲದಲ್ಲಿ ಕುಳಿತಿದ್ದಾನೆ. ಆ ಓನರ್ ಸರ್ವರ್ ಕೆಲಸ ಮಾಡುತ್ತಿದ್ದಾನೆ! ಬುದ್ಧಿಜೀವಿಗೆ ಒಮ್ಮೆ ಕಸಿವಿಸಿಯಾದರೂ ತಕ್ಷಣ ಸಾವರಿಸಿಕೊಂಡ.

"ನೋಡಿದ್ರ, ನೋಡಿದ್ರಾ..! ಈ ಬಾಲಕಾರ್ಮಿಕ ಸರ್ವರ್ ಕೆಲಸಕ್ಕೆ ನಾಲಾಯಕ್ಕು ಅಂತ ಅವನನ್ನು ಗಲ್ಲಾದಲ್ಲಿ ಇರಿಸಿದ್ದಾನೆ. ಈ ರೀತಿಯಾಗಿ ಬಡಮಕ್ಕಳ ಭವಿಷ್ಯವನ್ನು ಕಮರಿಸಿ ಜೀತದಾಳುವಂತೆ ದುಡಿಸುವ ಹೋಟೆಲ್ ಮಾಲಕರನ್ನು ತಕ್ಷಣ ಬಂಧಿಸಬೇಕೆಂದು ಬುದ್ಧಿಜೀವಿಗಳೆಲ್ಲ ಆಗ್ರಹಿಸುತ್ತೇವೆ" ಎಂದು ಮಾಧ್ಯಮದವರ ಕ್ಯಾಮರಾದ ಮುಂದೆ ಕೊರೆದ. ಎಲ್ಲರೂ "ಹೌದು! ಹೌದು" ಎಂದು ಧ್ವನಿಗೂಡಿಸಿದರು.

ಅಗ ಒಳಗಿನಿಂದ ಬಂದ ಧನಿ "ರೀ ಸ್ವಾಮಿ, ಗಲ್ಲಾಪೆಟ್ಟಿಗೆಯಲ್ಲಿರುವ ಬಾಲಕೃಷ್ಣ, ನನ್ನ ಮಗ, ಕೃಷ್ಣಭವನದ ಭಾವೀ ಓನರ್. ಅವನಿಗೆ ಶಾಲೆಗೆ ರಜೆ ಸಿಕ್ಕಿದೆ. ಅದಕ್ಕೆ ಹೋಟೆಲನ್ನು ಹೇಗೆ ನಡೆಸುವುದು ಎಂಬುದನ್ನು ಕಲಿಯುತ್ತಿದ್ದಾನೆ. ಈ ಹೋಟೆಲಲ್ಲಿ ನಾವಿಬ್ಬರೇ ಕೆಲಸಕ್ಕೆ ಇರುವುದು. ನಾನು ಮತ್ತೆ ನನ್ನ ಹೆಂಡತಿ. ಅದಕ್ಕೆ ಅವನು ಗಲ್ಲಾಪೆಟ್ಟಿಗೆಯಲ್ಲಿ ಕುಳಿತಿದ್ದಾನೆ. ಯಾರನ್ನು ಬಂಧಿಸುತ್ತೀರಿ?" ಎಂದ. ಅಲ್ಲಿಗೆ ಬಂದವರೆಲ್ಲ ಆ ಆತುರಬುದ್ಧಿಯ ಬುದ್ಧಿಜೀವಿಗೆ ಸರಿಯಾಗಿ ಮಂಗಳಾರತಿ ಎತ್ತಿ ತೆರಳಿದರು.

ಅದಕ್ಕೆ ಹೇಳುವುದು "ಕಣ್ಣಾರೆ ಕಂಡರೂ ಪರಾಂಬರಿಸಿ ನೋಡಬೇಕು!"



**ರಮೇಶ್ ಶೆಟ್ಟಿಗಾರ್ ಮಂಜೇಶ್ವರ**
**ಸುಂದರ್‌ರಾಮ್ ಶೆಟ್ಟಿ ನಗರ,**
**ಬೆಂಗಳೂರು**





## ಸಂಪಾದಕ ವಾಣಿ

# ನಾರಾಯಣ ಶೆಟ್ಟಿಗಾರ್

ಗಂಧರ್ವನೊಬ್ಬ ಪಾರ್ವತಿಯನ್ನು ಕುರಿತು ತಪಸ್ಸು ಮಾಡಿ ಅವಳನ್ನು ಮೆಚ್ಚಿಸಿದ. ನಿನಗೇನು ಬೇಕು ಎಂದು ಕೇಳಿದಾಗ ತನಗೆ ಅಮೃತ ಬೇಕೆಂದು ಕೇಳಿದ. ಪಾರ್ವತಿ ಒಪ್ಪಲಿಲ್ಲ. ಇಲಿಯ ರೂಪ ತಾಳಿದ ಗಂಧರ್ವ ಪಾರ್ವತಿಯ ಕೈಯಲ್ಲಿದ್ದ ಪಾತ್ರೆಯಿಂದ ಅಮೃತವನ್ನು ಕದ್ದು ಸೇವಿಸಿದ. ಇದರಿಂದ ಕೋಪಗೊಂಡ ಪಾರ್ವತಿ ಅವನನ್ನು ಇಲಿಯ ರೂಪದ ರಾಕ್ಷಸನಾಗುವಂತೆ ಶಪಿಸಿದಳು. ತನ್ನ ಶಾಪಕ್ಕೆ ಪರಿಹಾರ ಬೇಡಿದ ಗಂಧರ್ವನಿಗೆ ಪಾರ್ವತಿ "ಕೊಟ್ಟ ಶಾಪಕ್ಕೆ ಪರಿಹಾರ ಸಾಧ್ಯವಿಲ್ಲ. ಆದರೆ ನೀನು ಮುಂದೆ ಅವತಾರ ತಾಳುವ ಮಹಾಗಣಪತಿಗೆ ವಾಹನವಾಗಿ ಅವನ ಸೇವೆ ಮಾಡುವ ಭಾಗ್ಯ ನಿನಗೆ ದೊರೆಯಲಿ" ಎಂದು ಸಮಾಧಾನ ಮಾಡಿದಳು. ಹೀಗೆ ಅಮೃತ ಸೇವನೆಯಿಂದ ಅಮರನಾದ ಮೂಷಿಕಾಸುರನ ಜನನವಾಯಿತು.

ಮೂಷಿಕಾಸುರ ಪ್ರಿಯಂವದೆಯೆಂಬ ಯುವತಿಯನ್ನು ಮದುವೆಯಾದ. ಪ್ರಿಯಂವದೆ ತನ್ನ ತಪಸ್ಸಿನಿಂದ ಜಗನ್ಮಾತೆಯನ್ನು ಮೆಚ್ಚಿಸಿ ವರ ಪಡೆದವಳಾಗಿದ್ದಳು. ತಾನು ಸದಾ ಸೌಭಾಗ್ಯವತಿಯಾಗಿ ಇರಬೇಕೆಂದೂ, ತನ್ನ ಗಂಡನಿಗೆ ಅಪಾಯ ಒದಗಿ ಬಂದರೆ ಜಗನ್ಮಾತೆಯೇ ಅವನನ್ನು ಕಾಪಾಡಬೇಕೆಂದೂ ದೇವಿಯ ಅನುಗ್ರಹ ಹೊಂದಿದವಳಾಗಿದ್ದಳು. ತನ್ನ ಪತ್ನಿ ಪಡೆದ ವರಬಲದ ಬೆಂಬಲದಿಂದಾಗಿ ಮೂಷಿಕಾಸುರ ದೇವಲೋಕದ ಮೇಲೆ ಯುದ್ಧ ಸಾರಿದ. ಇಂದ್ರನನ್ನು ಸೋಲಿಸಿದ. ಇಂದ್ರ ಮಹಾಗಣಪತಿಯ ಮೊರೆ ಹೋದ. ಗಣಪತಿ ಮೂಷಿಕಾಸುರನೊಡನೆ ಯುದ್ಧಕ್ಕೆ ನಿಂತ.

ದೀರ್ಘಕಾಲದ ಯುದ್ಧ ನಡೆಯಿತು. ಇಬ್ಬರಿಗೂ ಜಯ ದೊರೆಯಲಿಲ್ಲ. ಕೊನೆಗೆ ಗಣೇಶ ತನ್ನ ದಂತವನ್ನು ಮುರಿದು ಮೂಷಿಕಾಸುರನ ಮೇಲೆ ಪ್ರಯೋಗಿಸಿದ. ಇದರಿಂದ ಮೂಷಿಕನ ಜೀವಕ್ಕೆ ಅಪಾಯ ಒದಗುವ ಕಾಲ ಬಂತು. ಆಗ ದೇವಿ ಪಾರ್ವತಿಯೇ ಪ್ರತ್ಯಕ್ಷಳಾಗಿ ತನ್ನ ಬಳೆಯನ್ನು ಉಪಯೋಗಿಸಿ ಅವನನ್ನು ರಕ್ಷಿಸಿದಳು ಮತ್ತು ತನ್ನ ದಂತವನ್ನು ಹಿಂದಕ್ಕೆ ಕರೆಸಿಕೊಳ್ಳುವಂತೆ ಗಣಪತಿಗೆ ಹೇಳಿದಳು. ಮೂಷಿಕಾಸುರ ಗಣೇಶನಿಗೆ ಶರಣಾಗಿ ಕ್ಷಮೆ ಬೇಡಿದ. ಗಣಪತಿ ಅವನನ್ನು ಕ್ಷಮಿಸಿ ತನ್ನ ವಾಹನವಾಗುವಂತೆ ಕೇಳಿಕೊಂಡ. ಮೂಷಿಕಾಸುರ ಸಂತೋಷದಿಂದ ಅದಕ್ಕೆ ಒಪ್ಪಿಕೊಂಡು ಗಣಪತಿಯ ವಾಹನವಾದ.











ಒಮ್ಮೆ ಕೈಲಾಸದಲ್ಲಿ ಪಾರ್ವತಿದೇವಿ ತನ್ನ ಪತಿ ಶಿವನೊಂದಿಗೆ ಕುಳಿತಿರುವಾಗ "ಪತಿದೇವ, ನನಗೆ ತಾಯಿಯ ಮನೆಗೆ ಹೋಗಿ ಬರಬೇಕೆಂಬ ಆಸೆಯಾಗುತ್ತಿದೆ. ದಯವಿಟ್ಟು ನನ್ನನ್ನು ಕಳುಹಿಸಿಕೊಡಿ" ಎಂದು ಕೇಳಿಕೊಳ್ಳುತ್ತಾಳೆ. ಅರ್ಧಾಂಗಿಯ ಆಸೆಯನ್ನು ಪರಮೇಶ್ವರ ಅಲ್ಲಗಳೆಯುವುದಿಲ್ಲ. ಆಯಿತು, ಹೋಗಿ ಬಾ. ಬೇಗನೇ ಬಂದುಬಿಡು ಎಂದು ಕಳುಹಿಸಿಕೊಡುತ್ತಾನೆ. ಭಾದ್ರಪದ ಮಾಸದ ಶುಕ್ಲ ಪಕ್ಷದ ತೃತೀಯ ದಿನದಂದು ಗೌರಿ ತನ್ನ ತವರು ಮನೆಗೆ ಸಂಭ್ರಮದಿಂದ ಬರುತ್ತಾಳೆ. ಅದನ್ನೇ ಗೌರಿ ಹಬ್ಬವೆಂದು ಆಚರಿಸಲಾಗುತ್ತದೆ.

ತವರು ಮನೆಗೆ ತನ್ನ ಪತ್ನಿಯನ್ನು ಕಳುಹಿಸಿದ ಅರ್ಧನಾರೀಶ್ವರ, ಅವಳನ್ನು ಬಿಟ್ಟಿರಲಾರದೆ ಮರುದಿನವೇ ಗಣೇಶನನ್ನು ಕರೆದು, ಕೂಡಲೇ ಹೋಗಿ ನಿನ್ನ ತಾಯಿಯನ್ನು ಹಿಂದಿರುಗಿ ಕರೆದುಕೊಂಡು ಬಾ ಎನ್ನುತ್ತಾನೆ. ಗೌರಿಯನ್ನು ಕೈಲಾಸಕ್ಕೆ ಕರೆದುಕೊಂಡು ಹೋಗುವ ಕೆಲಸಕ್ಕೆ ನಿಯುಕ್ತನಾದ ಗಣೇಶ ಭಾದ್ರಪದ ಮಾಸದ ಶುಕ್ಲ ಪಕ್ಷದ ಚತುರ್ಥಿಯಂದು ಅಜ್ಜಿ ಮನೆಗೆ ಬಂದು, ಅಜ್ಜಿ ಮನೆಯಲ್ಲಿ ಮಾಡಿಹಾಕಿದ ಕಡುಬು, ಮೋದಕ ಮೊದಲಾದ ಬಗೆಬಗೆಯ ತಿಂಡಿ ತಿನಿಸುಗಳನ್ನು ಸವಿದು. ತಾಯಿಯನ್ನು ತಂದೆಯ ಬಳಿಗೆ ಕರೆದುಕೊಂಡು ಹೋಗುತ್ತಾನೆ. ಗಣೇಶನು ಭೂಮಿಗೆ ಬರುವ ದಿನವನ್ನು ಗಣೇಶ ಚತುರ್ಥಿ ಎಂದು ಕರೆಯಲಾಗುತ್ತದೆ.

***

ಒಂದು ಸಲ ಶಿವನು ತ್ರಿಪುರರೆಂಬ ರಾಕ್ಷಸರೊಂದಿಗೆ ಯುದ್ಧ ಮಾಡಲು ತನ್ನ ಸೇನೆಯೊಂದಿಗೆ ಹೊರಟ. ಆದರೆ ಹೊರಡುವ ಮೊದಲು ಗಣೇಶನ ಪೂಜೆ ಮಾಡುವುದನ್ನು ಮರೆತು ಬಿಟ್ಟ. ಇದರಿಂದ ಅವನು ಅನೇಕ ವಿಘ್ನಗಳನ್ನು ಎದುರಿಸಬೇಕಾಯಿತು. ಮುಂದೆ ಸಾಗುವುದೇ ದುಸ್ತರ ಎನ್ನುವ ಪರಿಸ್ಥಿತಿ ಎದುರಾದಾಗ ಶಿವನಿಗೆ ತನ್ನ ತಪ್ಪಿನ ಅರಿವಾಗುತ್ತದೆ. ಕೂಡಲೇ ಗಣಪತಿಯ ಪೂಜೆಯನ್ನು ಶ್ರದ್ಧೆಯಿಂದ ಮಾಡಿದ ಕಾರಣ ಎಲ್ಲಾ ತೊಂದರೆಗಳು ದೂರವಾಗಿ ಶಿವನಿಗೆ ಅಸುರರನ್ನು ಗೆಲ್ಲುವುದು ಸಾಧ್ಯವಾಯಿತು.

***

ಶ್ರೀವಿಷ್ಣುವಿನ ಬಳಿ ಒಂದು ಶಂಖ ಇತ್ತು. ಇದ್ದಕ್ಕಿದ್ದ ಹಾಗೆ ಒಂದು ದಿನ ಆ ಶಂಖ ಕಾಣೆಯಾಯಿತು. ಎಲ್ಲೆಲ್ಲಿ ಹುಡುಕಿದರೂ ಅದು ಪತ್ತೆಯಾಗಲಿಲ್ಲ. ಆಗ ಶಂಖದ ಧ್ವನಿ ಕೇಳಿಸಿತು. ಶಂಖನಾದ ಕೈಲಾಸದ ಕಡೆಯಿಂದಲೇ ಬರುತ್ತಿತ್ತು. ವಿಚಾರಿಸಿದಾಗ ಶಂಖವನ್ನು ಗಣೇಶ ತೆಗೆದುಕೊಂಡಿರುವುದು ತಿಳಿದು ಬಂತು. ವಿಷ್ಣು ಕೈಲಾಸಕ್ಕೆ ಹೋಗಿ ಶಂಖವನ್ನು ಕೊಡುವಂತೆ ಗಣೇಶನನ್ನು ಕೇಳಿದ. ಗಣೇಶ ಒಪ್ಪಲಿಲ್ಲ. ಶಿವನೂ ಶಂಖವನ್ನು ಕೊಡುವಂತೆ ಹೇಳಿದರೂ ಗಣೇಶ ಕೊಡಲಿಲ್ಲ. ಗಣೇಶನ ಪೂಜೆ ಮಾಡುವುದೊಂದೇ ಶಂಖವನ್ನು ಪಡೆಯಲು ಉಳಿದಿರುವ ಮಾರ್ಗ ಎಂದು ವಿಷ್ಣುವಿಗೆ ಅರಿವಾಯಿತು. ವಿಷ್ಣು ಗಣೇಶನ ಪೂಜೆ ಮಾಡಿದಾಗ ಸಂಪ್ರೀತನಾದ ವಿಘ್ನೇಶ್ವರ ಶಂಖವನ್ನು ಹಿಂದಕ್ಕೆ ಕೊಟ್ಟ.

***

ಯಾವುದೇ ಕಾರ್ಯವನ್ನು ಮಾಡಬೇಕಾದರೂ ಬುದ್ಧಿ ಬೇಕು. ಬುದ್ಧಿಪೂರ್ವಕ ಮಾಡಿದ ಕೆಲಸ ಸಿದ್ಧಿಯಾಗುತ್ತದೆ. ಪ್ರಥಮಪೂಜಿತ ಬ್ರಹ್ಮಚಾರಿ ಸಿದ್ಧಿಬುದ್ಧಿಪ್ರದಾಯಕ ವಿಘ್ನವಿನಾಯಕನಿಗೆ ಬ್ರಹ್ಮನ ಮಕ್ಕಳಾದ ಸಿದ್ಧಿ ಬುದ್ಧಿ ಇಬ್ಬರು ಹೆಂಡತಿಯರು ಎಂಬ ಕಲ್ಪನೆಯೂ ಇದೆ. ಸಿದ್ಧಿಯಲ್ಲಿ ಕ್ಷೇಮ, ಬುದ್ಧಿಯಲ್ಲಿ ಲಾಭ ಎಂಬಿಬ್ಬರು ಮಕ್ಕಳು ಎಂಬ ಕತೆಯೂ ಇದೆ.

***

ಗಣೇಶನನ್ನು ಕುರಿತು ಹಲವಾರು ಕಥೆಗಳಿವೆ. ಬುದ್ಧಿವಂತಿಕೆ, ಜ್ಞಾನ, ಹೊಸ ಆರಂಭಗಳ ದೇವತೆ ಗಣೇಶ, ವಿಘ್ನ ವಿನಾಶಕ ಗಣಪತಿಯ ಹಬ್ಬವನ್ನು ಪ್ರತಿ ವರ್ಷ ಭಾದ್ರಪದ ಮಾಸದ ಶುಕ್ಲಪಕ್ಷದ ಚೌತಿ(ಚತುರ್ಥಿ)ಯ ದಿನ ಚೌತಿಹಬ್ಬವೆಂಬ ಹೆಸರಿನಿಂದ ಆಚರಿಸಲಾಗುತ್ತದೆ. ಇದೇ ತಿಂಗಳಿನಲ್ಲಿ ಗಣೇಶ ಚತುರ್ಥಿ ಬರುವುದರಿಂದ ಗಣಪತಿಯ ಸ್ಮರಣೆ ಮಾಡುತ್ತಾ ಅವನ ಅನುಗ್ರಹವನ್ನು ಬೇಡುತ್ತಿದ್ದೇವೆ.

ಅಂತೆಯೇ ನಿಮಗೆಲ್ಲರಿಗೂ ನಮ್ಮ ಸ್ವಾತಂತ್ರ್ಯ ದಿನಾಚರಣೆಯ ಶುಭಾಶಯಗಳು.

# ಶಾಲಿ ಭಾಷೆ

‘ಶಾಲಿಭಾಷೆ’ ಕೆಲವೊಂದು ಊರಿನ ಶೆಟ್ಟಿಗಾರ್ ಸಮಾಜದವರು ಮನೆ-ಮನೆಯಲ್ಲಿ ಮಾತಾಡುತಿದ್ದ ಒಂದು ಭಾಷೆ ಆಗಿತ್ತು. ನಾನು ಈ ಭಾಷೆಯ ಬಗ್ಗೆ ತುಂಬಾ ವಿಮರ್ಶೆ ಮಾಡಲು ಭಾಷಾತಜ್ಞನೂ ಆಲ್ಲ, ವಿದ್ವಾಂಸನೂ ಅಲ್ಲ. ನನ್ನ 'ಶಾಲಿಭಾಷೆ- ಜನೊರೆಲ್ಲಾ ಮರೇಂದ್ರಾ..?’ ಎಂಬ ಶಾಲಿಭಾಷೆ ಕವನ ಇಲ್ಲಿದೆ. ಈ ಕವನ ಬರೆಯಲು ಲೇಖಕರಾದ ಬೋಳೂರು ಗಂಗಾಧರ ಶೆಟ್ಟಿಯವರ 'ಶಾಲಿ ಭಾಷೆ ಶಬ್ದಕೋಶ -ಸರಳ ಸಂವಾದ ಸಹಿತ ಸ್ವಯಂ ಬೋಧಿನಿ' ಎಂಬ ಲೇಖನವೇ ಸ್ಪೂರ್ತಿ. ಎಷ್ಟೋ ಭಾಷೆಗಳು ಅವನತಿಯ ಅಂಚಿನಲ್ಲಿರುವ ಈ ಸಂದರ್ಭದಲ್ಲಿ 2013ರ ಮುಂಬೈಯ ಪದ್ಮಶಾಲಿ ಸಮಾಜ ಸೇವಾ ಸಂಘ (ರಿ) ಮುಂಬೈ, ಶಾಲಿಭಾಷೆಯ ಲೇಖನವನ್ನು ಮುದ್ರಿಸಿ, ಸಹಕರಿಸಿದ್ದಕ್ಕೆ ನಾನು ಅಭಿನಂದನೆಯನ್ನು ಸಲ್ಲಿಸುತ್ತೇನೆ. ಸುಮಾರು ಎಪ್ಪತ್ತು ವರ್ಷಗಳ ಹಿಂದೆ ಮನೆ ಮನೆಗಳಲ್ಲಿ  ಶೆಟ್ಟಿಗಾರ ಸಮಾಜದ ಬಾಂಧವರು ಕೆಲವೊಂದು ಊರಿನಲ್ಲಿ (ಉದಾ: ಸುರತ್ಕಲ್, ಮಿಜಾರು, ಸಸಿಹಿತ್ಲು, ಮಂಗಳೂರು) ಮಾತ್ರ ಪ್ರತಿನಿತ್ಯ ಮಾತಾಡುತ್ತಿದ್ದರು. ಕಾಲ ಕ್ರಮೇಣ ಆಧುನಿಕ ಕಾಲಘಟ್ಟದಲ್ಲಿ ಶಾಲಿಭಾಷೆ ಕೆಲವೇ ಕೆಲವಷ್ಟು ಜನರು ಮಾತ್ರ ಮಾತಾಡುವ ಭಾಷೆಯಾಗಿದೆ. ಆದ್ದರಿಂದ ಶೆಟ್ಟಿಗಾರರ ಶಾಲಿಭಾಷೆಯನ್ನು ಉಳಿಸಿ ಬೆಳೆಸುವಲ್ಲಿ ಸಮಾಜದ ಬಂಧುಗಳು, ಸಂಘ ಸಂಸ್ಥೆಗಳು, ಪ್ರೋತ್ಸಾಹಿಸಿ ಉತ್ತೇಜನ ನೀಡಬೇಕೆಂದು ಹಲವು ಭಾಷಾಭಿಮಾನಿಗಳ ಅಭಿಪ್ರಾಯವಾಗಿದೆ.

## ಶಾಲಿಭಾಷೆ
## ಜನೊರೆಲ್ಲಾ ಮರೇಂದ್ರಾ..?

ಅಡೊಂಡು ಕಾಲ ಇಂದ್ರ್
ಕೈನೆಗಲ್ ಡ ಚಟ ಪಟ
ಸಬ್ದಕೇ
ಚ್ಯಾಲ್ಯ ಭಾಷೆಲೆ
ಬಾಯಿಲೆ ತಾಳ..!

ಇಂಡ್ ಪರಿಸ್ಥಿತಿ ಬದಲಾಯಿರ್
ಬಿಂದೇ ಜನೊಕಳ್ಡ ಬಾಯಿಲೆ
ಪರಯಿರ್ ಲಕ ಅಯಿರ್ ಭಾಷೆ
ಸೇರಿರ್ ಪಾತಾಳೊ...!

ಲಿಪಿ ಇಲ್ಲರ ತಿರಸ್ಕಾರ
ಜವೊನೆರೆನ ಸಸಾರ
ಒಂಡು ಸಂಸ್ಕೃತಿಡ
ಆಚಾರ-ವಿಚಾರಲೆರ
ಜನೊರೆಲ್ಲಾ ಮರೆಂದ್ರಾ..?

ಕುಂಟು ನೇಸುಡು
ಜನರ ಮಾನ ಮುಚ್ಚಿರ
ಅಮ್ಮೆಡ ಮಾನ ಪೊಯೊಡುಂಡು
ಚ್ಯಾಲ್ಯೆರಡ ಪಸಂಗಲೇ ಎಲ್ಲೊದ್ಂಗ
ಚ್ಯಾಲ್ಯೆರ ಅಮ್ಮೆಡ ಮಾನ ಕಾಪಾಡುಂಗ
ಚ್ಯಾಲ್ಯೊರೇ ಅರ್ತ ಮಾಡ್ಯಂಗ
ಭಾಷೆ ನಾಶಡ ಅದರಲಕ ಪಾತೊಂಗ...!



**ಯಾದವ ಶೆಟ್ಟಿಗಾರ್**
**ಕಲ್ಲಾಪು**



# ಸಂಕ್ರಮಣ ಕಾಲದಲ್ಲಿರುವ ಭಾರತೀಯ ಕುಟುಂಬ ವ್ಯವಸ್ಥೆಯ ವಯೋವೃದ್ಧರು

ಬದಲಾವಣೆಯೊಂದೇ ಶಾಶ್ವತ ಎನ್ನುವ ಲೋಕೋಕ್ತಿಯಂತೆ, ಭಾರತೀಯ ಸಾಂಪ್ರದಾಯಿಕ ಕೌಟುಂಬಿಕ ಸಂಬಂಧಗಳಲ್ಲಿ ಕಾಲಾನುಕ್ರಮವಾಗಿ, ಸಾಕಷ್ಟು ಬದಲಾವಣೆಗಳು ಆಗಿರುವುದನ್ನು ನಾವು ಗುರುತಿಸಬಹುದು. ನಮ್ಮ ಸಂಸ್ಕೃತಿಯು ಬಾಹ್ಯ ಜಗತ್ತಿಗೆ ತೆರೆದುಕೊಂಡಂತೆ, ವೈಯಕ್ತಿಕ ಸ್ವಾತಂತ್ರ್ಯಕ್ಕೆ ಪೂರಕವಾಗುವ ಕೆಲವು ಅಂಶಗಳು ನಮಗೆ ಅಪ್ಯಾಯಮಾನವೆನಿಸಿ ನಮ್ಮದನ್ನಾಗಿಸಿಕೊಂಡಿದ್ದೇವೆ. ಇದರ ಫಲಶ್ರುತಿಯಾಗಿ, ಸಮಾಜದ ತಳಸಮುದಾಯಗಳು ಮತ್ತು ಮಹಿಳೆಯರು, ಸಾಂಪ್ರದಾಯಿಕತೆಯ ಕಟ್ಟುಪಾಡುಗಳೆಂಬ ಹಲವಾರು ಸಿಕ್ಕುಗಳಿಂದ ಮಾನಸಿಕವಾಗಿ ಬಿಡುಗಡೆ ಹೊಂದಿ, ಹೊಸ ಅರಿವಿನ ಪ್ರಪಂಚಕ್ಕೆ ತೆರೆದುಕೊಂಡು ಸಾಧ್ಯವಾಗಿರುವುದಂತೂ ನಿಜ. ಆದರೆ, ಈ ಬಿಡುಗಡೆಯ ಮಾರ್ಗದಲ್ಲಿ ಕೌಟುಂಬಿಕ ಸಂಬಂಧಗಳು ತಮ್ಮ ಬಾಂಧವ್ಯದ ಗಟ್ಟಿತನ ಕಳೆದುಕೊಂಡು ಸಡಿಲವಾಗುತ್ತಿರುವುದನ್ನು ಕೂಡ ನಾವಿಂದು ನೋಡಬಹುದು. ಹೀಗೆ, ಬಾಹ್ಯ ಪ್ರಭಾವದಿಂದ ಎಳೆಯ ಮನಸ್ಸುಗಳು ಮುಕ್ತತೆಗೆ ತೆರೆದುಕೊಂಡರೆ, ಹಳೆಯ ತಲೆಗಳು ಅತಂತ್ರತೆಯತ್ತ ತಳ್ಳಲ್ಪಡುತ್ತಿರುವುದು ಗಮನಾರ್ಹ ಅಂಶ.

ಹಾಗಾಗಿ, ವರ್ತಮಾನ ಭಾರತದ ಈ ಕಾಲಘಟ್ಟವನ್ನು, ಹಿರಿಯ ಜೀವಗಳ ಬದುಕಿನ ನಿರ್ವಹಣೆಯ ಕುರಿತು ಗಂಭೀರವಾಗಿ ಚಿಂತಿಸಬೇಕಾದ ಸಂಕ್ರಮಣ



ಕಾಲವೆನ್ನಬಹುದು. ಈ ಚರ್ಚೆಯು ಯಾಕೆ ಮುಖ್ಯವಾಗುತ್ತದೆಂದರೆ, ಬದುಕಿರುವ ಪ್ರತಿಯೋರ್ವನು/ಳು ಈ ಕಾಲಘಟ್ಟವನ್ನು ಅನುಭವಿಸಲೇ ಬೇಕಾಗಿರುವುದರಿಂದ, ಪ್ರಸಕ್ತ ಕಾಣಿಸದಿರುವ ಸೂಕ್ತ ಪೂರ್ವ ತಯಾರಿ, ಮಾನಸಿಕ ಸ್ಥಿರತೆ ಮತ್ತು ಬದುಕುವ ಕಲೆಯನ್ನು ಅಂತರ್ಗತಮಾಡಿಕೊಳ್ಳಬೇಕಾದುದು ಅಗತ್ಯ. ಇಂದು, ನಾಮಕಾವಸ್ತೆ ವಯೋವೃದ್ಧರಿಗೆ ಸಾಕಷ್ಟು ಯೋಜನೆಗಳಿರಬಹುದು. ಆದರೆ, ಅದಕ್ಕಿಂತ ಮಿಗಿಲಾಗಿ, ಅವರಿಗೆ ಗೌರವಯುತ ಜೀವನ ನೀಡುವಂತಹ ಸಾಮಾಜಿಕ ನಿಲುವು ನಮ್ಮದಾಗಿಲ್ಲ. ಇಂತಹ ಸಂವೇದನೆ 'ಬುದ್ಧಿವಂತ' ಮನುಷ್ಯನಲ್ಲಿ ಜಾಗೃತಗೊಳಿಸಬೇಕಾದುದು ನಮ್ಮೆಲ್ಲರ ಆದ್ಯ ಕರ್ತವ್ಯ. ಈ ಸಾಮಾಜಿಕ ಆಂದೋಲನವು ನಮ್ಮ ಸುರಕ್ಷಿತ ಭವಿಷ್ಯಕ್ಕಾಗಿಯೂ ಅಗತ್ಯ.

ಹಿಂದಿನ ಅವಿಭಕ್ತ ಕುಟುಂಬ ವ್ಯವಸ್ಥೆಯಲ್ಲಿ, ವಯೋವೃದ್ಧರಿಗೆ ಗೌರವದ ಸ್ಥಾನಮಾನ, ನಿರ್ಧಾರ ತೆಗೆದುಕೊಳ್ಳುವ ಅಧಿಕಾರ, ಆರೈಕೆ ಧಾರಾಳವಾಗಿ ಸಿಗುತ್ತಿತ್ತು. ಅಲ್ಲಿ ಎಳೆಯರಿಗೆ 'ಹುಡುಗು ಬುದ್ದಿ' ಪಟ್ಟವಿದ್ದು, ಅವರ ಜೀವನದ ರೂಪುರೇಷೆಯನ್ನೆಲ್ಲಾ ಹಿರಿಯರೇ ನಿರ್ಧರಿಸುತ್ತಿದ್ದರು. ಇದಕ್ಕೆ ತದ್ವಿರುದ್ಧವಾಗಿ, ಇಂದು ನಮ್ಮ ಯುವಜನರು ಸೂತ್ರವಿಲ್ಲದ ಗಾಳಿಪಟದಂತೆ, ಕೈಯಲ್ಲೊಂದು ಸ್ಮಾರ್ಟ್ ಫೋನ್ ಹಿಡಿದು ಪ್ರಪಂಚವನ್ನು ಮರೆತು ಧ್ಯಾನಸ್ಥರಾಗಿರುವಂತೆ ಕಂಡುಬಂದರೆ, ವಯಸ್ಸಾದವರು ತೀವ್ರ ಸಂಕಷ್ಟಸ್ಥಿತಿಯಲ್ಲಿದ್ದರೂ ಗಣನೆಗೆ ತೆಗೆದುಕೊಳ್ಳದ ಸ್ಥಿತಿಯಲ್ಲಿದ್ದಾರೆ. ಹೀಗೆ, ಬದುಕಿನ 'ರಿಟೇಕ್' ಮಾಡಲಾಗದಂತಹ, ಮಾನಸಿಕ, ದೈಹಿಕ ಮತ್ತು ಆರ್ಥಿಕ ಅಶಕ್ತಿಯ ದಣಿವಿನಲ್ಲಿರುವ ಮನುಷ್ಯನ ಜೀವನದ ಕೊನೆಯ ದಿನಗಳನ್ನು ಸಹನೀಯ ಮತ್ತು ಆನಂದದಾಯಕ ಮಾಡುವ ಜವಾಬ್ದಾರಿ ಸಮಾಜಕ್ಕಿದೆಯಲ್ಲವೇ? ಇಂದಿನ ವಯೋವೃದ್ಧರ ದುಸ್ಥಿತಿಯನ್ನು ನೋಡಿದರೆ, ಅವರ ಬದುಕಿನ ಸೂಕ್ತ ನಿರ್ವಹಣೆಗಾಗಿ, ತುರ್ತಾಗಿ ದೇಶದಾದ್ಯಂತ ಕೈಗೆತ್ತಿಕೊಳ್ಳಬೇಕಾದ ಗ್ಯಾರಂಟಿ ಯೋಜನೆಯೊಂದರ ಅಗತ್ಯವಿದೆಯೆನಿಸುತ್ತದೆ.

ವೈಯಕ್ತಿಕತೆಯೆನ್ನುವುದು ಪಾಶ್ಚಾತ್ಯ ಸಂಸ್ಕೃತಿಯ ವರವೋ ಅಥವಾ ಶಾಪವೋ ಎನ್ನುವ ವಿಮರ್ಶೆಯನ್ನು ಜನರು ಅವರವರ ಜಾತಿ, ವರ್ಗ, ಧರ್ಮ, ಲಿಂಗ, ವಯಸ್ಸು, ಆರ್ಥಿಕ ಸ್ಥಿತಿಗೆ ಅನುಗುಣವಾಗಿ ಪ್ರತಿಕ್ರಿಯಿಸಬಹುದು. ಒಟ್ಟಿನಲ್ಲಿ, ಇದು ಬಾಹ್ಯ ಜಗತ್ತಿನ ಪಲ್ಲಟಗಳ ಪರಿಣಾಮವಾದರೂ, ನಮ್ಮ ಕುಟುಂಬಗಳಿಂದು ಬಿರುಕೊಡೆದು ಚಿಕ್ಕ ಚಿಕ್ಕ ತುಂಡುಗಳಾಗಿ ಬೇರ್ಪಡುತ್ತಿರುವುದಂತೂ ಸತ್ಯ. ಸಾಮಾನ್ಯವಾಗಿ ಬಾಹ್ಯ ಸಂಗತಿಗಳು ನಮ್ಮ ನಿಯಂತ್ರಣದಲ್ಲಿ ಇಲ್ಲದಿರುವಾಗ, ವೈಯಕ್ತಿಕ ನೆಲೆಯಲ್ಲಿ ಈ ಸಾರ್ವತ್ರಿಕ ಸಮಸ್ಯೆಗೆ ಸನ್ನದ್ಧರಾಗಿ ಎದುರಿಸುವ ಬಗೆ ಹೇಗೆ?

ಭಾರತೀಯ ಕುಟುಂಬ ವ್ಯವಸ್ಥೆಯಲ್ಲಿ ವಯೋವೃದ್ಧರನ್ನು ಕಾಳಜಿ, ಪ್ರೀತಿ ಮತ್ತು ಗೌರವದಿಂದ ನೋಡಿಕೊಳ್ಳಬೇಕೆಂಬ ಅಲಿಖಿತ ನಿಯಮವೇನೋ ಇದೆ. ಆದರೆ, ಅದರಂತೆ ಇಂದು ಹೆತ್ತವರನ್ನು ನೋಡಿಕೊಳ್ಳದ ಮಕ್ಕಳನ್ನು/ ಬಂಧುಬಳಗವನ್ನು ದೂಷಿಸಿದರೆ ಪ್ರಯೋಜನವೇನಾದರೂ ಇದೆಯೇ? ಇದೊಂದು, ಸ್ವಯಂಪ್ರೇರಿತವಾಗಿ ಜಾಗ್ರತವಾಗಬೇಕಾದ ಜವಾಬ್ದಾರಿಯ ಪ್ರಜ್ಞೆ. ಹಾಗಾಗಿ, ನಮ್ಮ ಭವಿಷ್ಯದ ಪರಾವಲಂಬನೆಯ ದಿನಗಳ ಸಮರ್ಥ ನಿರ್ವಹಣೆಗೆ, ನಾವೇ ಸಿದ್ಧತೆ ಮಾಡಿಕೊಳ್ಳುವುದು ಹೆಚ್ಚು ಸ್ವನಿಯಂತ್ರಿತ ಮತ್ತು ಕಡಿಮೆ ಅನಿಶ್ಚಿತತೆಯಿಂದ ಕೂಡಿರುವ ಜೀವನ ವಿಧಾನವೆನ್ನಬಹುದು.

ವೃದ್ಧಾಪ್ಯದ ದಿನಗಳಿಗೆ, ನಮ್ಮ ತಯಾರಿ ಹೇಗಿರಬೇಕು? ಕೇವಲ ನಿಧಿ ಹೂಡಿಕೆ ಮತ್ತು ಉಳಿತಾಯವಷ್ಟೇ ಸಾಕೇ? ದೈಹಿಕ ಮತ್ತು ಮಾನಸಿಕ ಯೋಗಕ್ಷೇಮವನ್ನು ನೋಡಿಕೊಳ್ಳಬೇಕಲ್ಲವೇ? ಬದುಕಿನುದ್ದಕ್ಕೂ ಜನಜಂಗುಳಿಯಲ್ಲಿದ್ದು, ನಿವೃತ್ತಿಯ

ನಂತರ ಅನುಭವಿಸುವ ಒತ್ತಾಯದ ಒಂಟಿತನ, ನಿರುಪಯುಕ್ತತೆ, ಆರೋಗ್ಯದ ಸಮಸ್ಯೆ ಮತ್ತು ಸಂಬಂಧಿತ ಮಾನಸಿಕ ಖಿನ್ನತೆ ಕಾಡಿದಾಗ, ಸಾವು ಸಮೀಪಿಸುತ್ತಿರುವಾಗ ಮತ್ತು ಬದುಕು ಹಂಚಿಕೊಂಡವರೆಲ್ಲಾ ಒಬ್ಬೊಬ್ಬರೇ ಕ್ಷಣಮಾತ್ರದಲ್ಲಿ ಕಣ್ಣೆದುರೇ ಕಣ್ಮರೆಯಾಗುತ್ತಿರುವಾಗ, ನಮ್ಮನ್ನು ನಾವು ನಿಭಾಯಿಸುವುದಕ್ಕೆ ಸಿದ್ಧತೆ ಮಾಡಿಕೊಳ್ಳಬೇಕಲ್ಲವೇ?

ಮೂಲತಃ, ಸ್ವಕೇಂದ್ರಿತವಾಗಿ ವ್ಯವಹರಿಸುವ ನಮಗಿಂದು, ಮಕ್ಕಳು ನಮ್ಮ ವೃದ್ಧಾಪ್ಯ ಕಾಲದ ಊರುಗೋಲಾಗಿ ಕಂಡರೆ, ವೃದ್ಧರು ಇನ್ನೇನೂ ಪ್ರಯೋಜನಕ್ಕೆ ಬಾರದ ಭೂತಕಾಲದ ಸವಕಲು ನಾಣ್ಯದಂತೆ ಕಾಣಿಸುತ್ತಾರೆ. ಈ ನಿಲುವು, ನಾವು ನಮ್ಮ ಜೀವನ ದೃಷ್ಟಿಯನ್ನು ಬದಲಾಯಿಸಬೇಕೆಂದು ಒತ್ತಾಯಿಸುತ್ತದೆ. ಇಂದು, ಮನೆಗಳು ದೊಡ್ಡದಾಗುತ್ತಿವೆ ಮತ್ತು ಮನಸ್ಸುಗಳು ಚಿಕ್ಕದಾಗುತ್ತಿವೆ. ಲೌಕಿಕ ವ್ಯವಹಾರಗಳಲ್ಲಿ ಮುಳುಗಿರುವ ಮಕ್ಕಳಿಗೆ, ಹೆತ್ತವರೊಂದಿಗೆ ಕಳೆಯಲು ಸಮಯವಿರುವುದಿಲ್ಲ. ಮೊಮ್ಮಕ್ಕಳೊಂದಿಗೆ ಆಟವಾಡುವ, ಕಥೆ ಹೇಳ ಬಯಸುವ ತುಡಿತವಿದ್ದರೂ, ಅವರ ಶಾಲಾ ಚಟುವಟಿಕೆಗಳ ಒತ್ತಡದಲ್ಲಿ( ಅಥವಾ ಹೆತ್ತವರ ಸೂಚನೆಯಂತೆ) ಅವರಿಗೂ ಹಿರಿಯರೊಂದಿಗೆ ಕಳೆಯಲು ಸಮಯವಿಲ್ಲ. ಜೊತೆಗೆ, ವಯಸ್ಸು ಹೆಚ್ಚಾದಂತೆ ಕಾಡುವ ಆರೋಗ್ಯ ಸಮಸ್ಯೆಗಳು, ಅದರ ಖರ್ಚುವೆಚ್ಚಗಳು, ಆರೈಕೆಗೆ ಅನ್ಯರನ್ನು ಅವಲಂಬಿಸಬೇಕಾದ ಅನಿವಾರ್ಯತೆ, ಇತ್ಯಾದಿಗಳನ್ನು ನಿಭಾಯಿಸುವ ಸಂಯಮ ಮತ್ತು ಕಾಳಜಿ, ಮಕ್ಕಳಲ್ಲಿ ಕಾಣಿಸುತ್ತಿಲ್ಲ. ಈ ನಿಟ್ಟಿನಲ್ಲಿ, ಮಯೋವೃದ್ಧರು ತಮ್ಮ ಇಳಿವಯಸ್ಸಿನಲ್ಲಿ ಸಂಭಾಳಿಸಿಕೊಳ್ಳಲು, ದುಡಿಯುವ ವಯಸ್ಸಿನಲ್ಲಿಯೇ ಪೂರ್ವಸಿದ್ಧತೆ ಮಾಡಿಕೊಳ್ಳಬೇಕಾದುದು ಅಗತ್ಯ.

**ಮಾನಸಿಕ ಸಿದ್ಧತೆ:**

'ಮಕ್ಕಳಿಗಾಗಿ ಆಸ್ತಿ ಮಾಡಬೇಡಿ, ಬದಲಾಗಿ ಅವರನ್ನೇ ಆಸ್ತಿಯನ್ನಾಗಿಸಿ' ಎನ್ನುವ ಹಿತನುಡಿಯನ್ನು ಅಕ್ಷರಶಃ ಪಾಲಿಸಿದರೆ, ಬಹುಶಃ ಪ್ರಪಂಚದಲ್ಲಿರುವ ಹೆಚ್ಚಿನ ಸಮಸ್ಯೆಗಳು ಕಣ್ಮರೆಯಾಗುತ್ತವೆ. ಮಕ್ಕಳ ಮೇಲಿನ ಅತಿಯಾದ ವ್ಯಾಮೋಹದಿಂದ ಮತ್ತು ನಮ್ಮ ಈಡೇರದ ಕನಸುಗಳನ್ನು ಅವರ ಮೂಲಕ ನನಸಾಗುವುದಕ್ಕಾಗಿ, ಅವರ ಮೇಲೆ ಅತಿಯಾದ ಒತ್ತಡ ಹೇರಿ, ಅವುಗಳನ್ನು ವಾಸ್ತವವಾಗಿಸುವುದಕ್ಕೆ ಶಕ್ತಿ ಮೀರಿ ನಾವು ದುಡಿದು (ಕೆಲವೊಮ್ಮೆ ರಾಜಿಗಳನ್ನು ಮಾಡಿ) ವಯಸ್ಸು ಮೀರಿದ ಹಂತ ತಲುಪುತ್ತೇವೆ. ಹೀಗೆ, ಇಂದಿನ ಮಕ್ಕಳು ಅವರ ಬಾಲ್ಯ ಮತ್ತು ನಮ್ಮ ಈಡೇರದ ಕನಸಿನ ಬಾಲ್ಯ ಎರಡನ್ನೂ ಮೇಳೈಸಿ ದೊಡ್ಡವರಾಗಬೇಕಾದ ಒತ್ತಡದಲ್ಲಿದ್ದಾರೆ. ಇದರಿಂದ ಉಂಟಾಗಿರುವ ಪ್ರಮುಖ ಸಮಸ್ಯೆಯೆಂದರೆ, ಹೆತ್ತವರು ಮತ್ತು ಮಕ್ಕಳ ನಡುವೆ ಎದ್ದಿರುವ ಸಂಬಂಧಗಳ ಪರಕೀಯತೆ. ನಾವು ಪ್ರೀತಿಯ ಬದಲಾಗಿ ಅವರಿಗೆ ಅತ್ಯುತ್ತಮ ವ್ಯವಸ್ಥೆ ನೀಡುವುದಕ್ಕೆ ಹೋರಾಡುತ್ತೇವೆ. ಹಾಗಾಗಿ, ಅವರೂ ಕೂಡ ನಮ್ಮ ಇಳಿವಯಸ್ಸಿನಲ್ಲಿ ಪ್ರೀತಿಯ ಬದಲಾಗಿ ಬದುಕುವ ವ್ಯವಸ್ಥೆಯನ್ನಷ್ಟೇ ಮಾಡಿಕೊಟ್ಟು ದೂರವಿದ್ದರೆ ಆಶ್ಚರ್ಯ ಪಡಬೇಕಾಗಿಲ್ಲ. ನಾವು ನಮ್ಮ ಭವಿಷ್ಯದ ದಾರಿಯಲ್ಲಿ ರಭಸವಾಗಿ ನಡೆಯುತ್ತಾ, ನಿಧಾನವಾಗಿ ನಡೆಯುವ ನಮ್ಮ ಹೆತ್ತವರನ್ನು ಹಿಂದಕ್ಕೆ ಬಿಟ್ಟು ಮುಂದೆ ಸಾಗಿದಂತೆ, ನಮ್ಮ ಮಕ್ಕಳನ್ನು ಸ್ಪರ್ಧಾಯುಗದಲ್ಲಿ ಮುನ್ನುಗ್ಗುವುದಕ್ಕೆ ಬಿಟ್ಟ ನಾವು, ಅವರೆದುರು ಹಳೆಯ ಕಾಲದವರಾಗಿ ಹಿಂದುಳಿದರೆ ಸೋಜಿಗವಿಲ್ಲ. ಇದನ್ನು ಕಾಲದ ಮಹಿಮೆಯೆನ್ನಬಹುದೋ ಗೊತ್ತಿಲ್ಲ. ಇಂದಿನ ಮಕ್ಕಳಿಗೆ ಹೆತ್ತವರು ತಮ್ಮ ವೈಯಕ್ತಿಕ ಬದುಕಿನ ದಾರಿಯಲ್ಲಿ ಅನಗತ್ಯ ಹೊಣೆಗಾರಿಕೆ ಮತ್ತು ವ್ಯರ್ಥದ ಖರ್ಚು, ಸ್ವಾತಂತ್ರ್ಯಕ್ಕೆ ಅಡ್ಡಿ, ಅಂದುಕೊಂಡರೆ ಅಚ್ಚರಿಯಿಲ್ಲ. ಮಕ್ಕಳ ಬಾಯಿಂದ ಮನಸ್ಸು ಘಾಸಿಗೊಳಿಸುವ, ನಿಷ್ಕರುಣೆಯ ವ್ಯವಹಾರದ ಮಾತು ಕೇಳುವ ಪರಿಸ್ಥಿತಿಗಿಂತ, ಅವರಿಗೆ ಭಾರವಾಗದೆ, ಹಂಗಿಲ್ಲದೆ, ತಮ್ಮಿಚ್ಛೆಯಂತೆ, ಕೊನೆಯಪಕ್ಷ ಜೀವನದ ಅಂತಿಮ ದಿನಗಳಲ್ಲಾದರೂ ಲೋಕದ ನಿರೀಕ್ಷೆಗಳ ಭಾರವ ಕಳಚಿ ನೆಮ್ಮದಿಯಿಂದ ಕಳೆಯಲು ಮಾನಸಿಕ ಸಿದ್ಧತೆಯ ಅಗತ್ಯವಾಗಿದೆ. ಇದಕ್ಕಾಗಿ, ಬುದ್ಧನ ಮಾತು, 'ನಿನಗೆ ನೀನೆ ದಾರಿದೀಪ' ಎನ್ನುವುದನ್ನು ಅಂತರ್ಗತಗೊಳಿಸುವುದು, ಮಕ್ಕಳನ್ನು ಬೆಳೆಸುವುದು ನಮ್ಮ ಆನಂದಕ್ಕಾಗಿಯೇ ಹೊರತು, ಅವರ ಮೇಲೆ ಭಾರವಾಗುವುದಕ್ಕಾಗಿಯಲ್ಲ ಎನ್ನುವ ನಿರ್ಲಿಪ್ತತೆಯನ್ನು ಮೈಗೂಡಿಸಿಕೊಳ್ಳುವುದು ಅಗತ್ಯ. ಇಂತಹ, ಮಾನಸಿಕ ಪೂರ್ವಸಿದ್ಧತೆಯನ್ನು ಹಿರಿಯರಲ್ಲಿ ಬೆಳೆಸುವ ಕಾರ್ಯಕ್ರಮಗಳು ಮತ್ತು ಯೋಜನೆಗಳು ಹೆಚ್ಚು ಜನಪ್ರಿಯ ಮತ್ತು ಸಾಮೂಹಿಕ ಆಂದೋಲವಾಗಬೇಕಾಗಿದೆ.

**ದೈಹಿಕ ಆರೋಗ್ಯ:**

ಸಾಮಾನ್ಯವಾಗಿ, ನಮ್ಮ ಮೈಯಲ್ಲಿ ದುಡಿಯುವ ಶಕ್ತಿ, ಮನಸ್ಸಿನಲ್ಲಿ ಇಚ್ಛಾಶಕ್ತಿ, ಜೊತೆಗೆ, ಪ್ರೀತಿಯ ಮಕ್ಕಳು ವೃದ್ಧಾಪ್ಯದಲ್ಲಿ ನೋಡಿಕೊಳ್ಳುತ್ತಾರೆಂಬ ಅಚಲ ವಿಶ್ವಾಸ ಇರುವಷ್ಟು ದಿವಸ ನಿಶ್ಚಿಂತೆಯಾಗಿರುತ್ತೇವೆ. ಆದರೆ, ವೃದ್ಧಾಪ್ಯದಲ್ಲಿ ಸಹಜವಾಗಿ ಕಾಣಿಸಿಕೊಳ್ಳುವ ಕಾಯಿಲೆಗಳು ದೀರ್ಘಕಾಲದವರೆಗೆ ನಮ್ಮ ಮೈಮನಸ್ಸುಗಳನ್ನು ಕಾಡಿದಾಗ, ಪರಾವಲಂಬನೆ ಅನಿವಾರ್ಯವಾದಾಗ, ಆರ್ಥಿಕ ಪರಿಸ್ಥಿತಿ ಹದಗೆಟ್ಟಾಗ, ಬದುಕು ಹತಾಶೆಗೆ ಮತ್ತು ಖಿನ್ನತೆಗೆ ತಳ್ಳಲ್ಪಡುತ್ತದೆ. ಹಾಗಾಗಿ, ದೈಹಿಕ ವ್ಯಾಯಾಮ ಮತ್ತು ಸ್ವನಿಯಂತ್ರಿತ ಊಟೋಪಚಾರವನ್ನು ನಮ್ಮ ದೈನಂದಿನ ಜೀವನದ ಭಾಗವಾಗಿಸಿಕೊಂಡಲ್ಲಿ, ಹೆಚ್ಚಿನ ವಯೋಸಂಬಂಧಿ ಕಾಯಿಲೆಗಳನ್ನು ಸೈರಿಸಿಕೊಂಡು ಸ್ವಾವಲಂಬಿಯಾಗಿ ಬದುಕುವಷ್ಟು ದೈಹಿಕ ಶಕ್ತಿಯನ್ನು ಉಳಿಸಿಕೊಂಡಿರುತ್ತೇವೆ.

**ಆರ್ಥಿಕ ಸುಭದ್ರತೆ :**

ನಮ್ಮನ್ನು ನೋಡಿಕೊಳ್ಳುವಷ್ಟು ಉಳಿತಾಯ ನಮ್ಮ ನಿಯಂತ್ರಣದಲ್ಲಿದ್ದರೆ, ಆತ್ಮವಿಶ್ವಾಸದಿಂದ ಬದುಕಲು ಸಾಕಷ್ಟು ಭರವಸೆ ಇರುತ್ತದೆ. ಇದು, ವಿಶೇಷವಾಗಿ ಹೆಣ್ಣುಮಕ್ಕಳಿಗೆ ಮತ್ತು ವಯೋವೃದ್ಧರಿಗೆ ಹೆಚ್ಚು ಅನ್ವಯಿಸುತ್ತದೆ. ನಾವು ಮಕ್ಕಳನ್ನು ಪ್ರೀತಿಸಬೇಕು ನಿಜ, ಆದರೆ, ನಮ್ಮೆಲ್ಲಾ ಆರ್ಥಿಕ ಮೂಲಗಳನ್ನು ಅವರಿಗೆ ಹಸ್ತಾಂತರಿಸುವ ಬದಲಾಗಿ, ನಮ್ಮ ಜೀವನ ನಿರ್ವಹಣೆಗಾಗುವಷ್ಟು ನಮ್ಮ ಕೈಯಲ್ಲೇ ಉಳಿಸಿಕೊಂಡಲ್ಲಿ, ಎಂತಹ ಅನಿಶ್ಚತೆಯನ್ನು ಎದುರಿಸುವ ಧೈರ್ಯ ಬರುತ್ತದೆ.

**ಬದುಕಿನ ಸಹಜ ಹಂತವೆನಿಸಿಕೊಳ್ಳಬೇಕಾಗಿರುವ ವೃದ್ಧಾಶ್ರಮಗಳು:**

ವೃದ್ಧಾಪ್ಯದಲ್ಲಿಯೂ ಪರಾವಲಂಭಿಯಾಗದೆ ಸ್ವಾಭಿಮಾನದಿಂದ ಬದುಕಲು ಸಾಧ್ಯ. ಆದರೆ, ಅದಕ್ಕೆ ಪೂರಕವಾದ ದೈಹಿಕ, ಮಾನಸಿಕ ಮತ್ತು ಆರ್ಥಿಕ ಭರವಸೆಯನ್ನು ದೃಢಪಡಿಸಿಕೊಳ್ಳಬೇಕಾದುದು ಅನಿವಾರ್ಯ. ನಾವಿಂದು, ವೃದ್ಧಾಶ್ರಮಗಳನ್ನು ಅನಾಥಾಶ್ರಮಗಳೆಂದೇ ಪರಿಗಣಿಸುತ್ತೇವೆ. ಈ ಪರಿಕಲ್ಪನೆಯನ್ನು ಬದಲಾಯಿಸಿ, ಇದು ಜೀವನದ ಕೊನೆಯದಿನಗಳನ್ನು ಸಾಮೂಹಿಕವಾಗಿ ಆನಂದಮಯವಾಗಿ ಕಳೆಯುವ ತಾಣವನ್ನಾಗಿಸಬೇಕಾಗಿದೆ. ವೃದ್ಧಾಶ್ರಮಗಳಿಂದು, ಕೇವಲ ಅನಾಥರಿಗೆ ಮಾತ್ರವಲ್ಲ , ಒಂಟಿತನ ಅನುಭವಿಸುವ ಉಳ್ಳವರಿಗೂ ಅಗತ್ಯವಾಗಿದೆ. ಹಾಗಾಗಿ, ವೃದ್ಧಾಶ್ರಮಗಳು ಹೆಚ್ಚಿನ ಸಂಖ್ಯೆಯಲ್ಲಿ ತೆರೆದು, ಅವರು ಕೊಡುವ ಸೌಕರ್ಯಕ್ಕೆ ಅನುಗುಣವಾಗಿ ವಯೋವೃದ್ಧರು ಆಯ್ಕೆ ಮಾಡುವಂತಹ ಪ್ರಕ್ರಿಯೆಗಳು ಸಾಮಾನ್ಯವಾಗಿಸಿದಲ್ಲಿ, ವೃದ್ಧಾಶ್ರಮಗಳಲ್ಲಿ ಯಾವ ಹಂಗಿಲ್ಲದೆ ನೆಮ್ಮದಿಯಿಂದ ತಮ್ಮ ಸಮವಯಸ್ಕರೊಂದಿಗೆ ದಿನಗಳೆಯಲು ಹೆಚ್ಚು ಜನರು ಮುಂದೆ ಬಂದಾರು. ಅನಿವಾರ್ಯ ಕಾರಣಗಳಿಂದ ಹೆತ್ತವರನ್ನು ನೋಡಿಕೊಳ್ಳಲಾಗದ ಮಕ್ಕಳು ಕೂಡ ಉತ್ತಮ ಸೌಕರ್ಯವಿರುವ ವೃದ್ಧಾಶ್ರಮಗಳಲ್ಲಿ ಹೆತ್ತವರನ್ನು ಬಿಟ್ಟು, ಅದರ ಖರ್ಚುವೆಚ್ಚ ವಹಿಸಿ, ನಿರಂತರವಾಗಿ ಭೇಟಿ ನೀಡುವುದರ ಮೂಲಕ ತಮ್ಮ ಋಣ ತೀರಿಸಬಹುದು. ಇದು, ಒಟ್ಟಿಗಿದ್ದೂ ದಿನಾ ಕಿತ್ತಾಡುತ್ತಾ ಬದುಕುವುದಕ್ಕಿಂತ ಮೇಲು. ಇಂತಹ, ಮನಪರಿವರ್ತನೆಯು ಸಾಮುದಾಯಿಕವಾಗಿ ಆಗಬೇಕಾದುದು ಇಂದಿನ ತುರ್ತು.



ಡಾ. ಜ್ಯೋತಿ
ಸಹಾಯಕ ಪ್ರಾಧ್ಯಾಪಕರು, ಇಂಗ್ಲಿಷ್ ವಿಭಾಗ,
ವಿಶ್ವವಿದ್ಯಾನಿಲಯ ವಿಜ್ಞಾನ ಕಾಲೇಜು,
ತುಮಕೂರು






ಯತೀಶ್ ಎಲ್. ಶೆಟ್ಟಿಗಾರ್,
ಸಿದ್ಧಕಟ್ಟೆ ,
ವಿದ್ಯಾರಣ್ಯಪುರ, ಬೆಂಗಳೂರು

ಕವಿತಾವಾಣಿ

# ಚಿಂತೆಗೆ ಹೆದರದಿರು ಮನವೆ

ನೂರಾರು ಚಿಂತೆಗಳ ನಡುವೆ ಖುಷಿಯಾಗಿರು
ನೀ ಮನವೇ ಈ ಬದುಕಿನಲಿ ಎಂದೆಂದೂ

ಚಿಂತೆಗಳೇನಿರಲಿ ಬಾಳಲಿ ನೀ ನಗು ನಗುತಿರು
ದುಃಖಗಳ ನಡುವೆ ಸುಖವದು ಬರದೆ ಇರದು

ಸುಖ ದುಃಖಗಳ ಹೂರಣ ಈ ಬದುಕು
ಸಮನಾಗಿ ಸ್ವೀಕರಿಸು ನೀ ಎಂದೆಂದೂ

ಚಿಂತೆಗಳ ಸಂತೆಯಲ್ಲಿ ಗೆಲುವಾಗಿ ಹೊರಬಂದು
ದಾರಿ ದೀಪವಾಗು ಮನಕೆಂದೂ

ಮಳೆಗಾಲದಿ ಬಂದು ಹೋಗುವ ಗುಡುಗು
ಸಿಡಿಲಿನಂತೆ ಈ ನೋವು ನಲಿವುಗಳಿಹುದು

ಸುಖ ದುಃಖಗಳ ಸಮನಾಗಿ ಸ್ವೀಕರಿಸು
ಬದುಕಿನಲಿ ಹಾಸುಹೊಕ್ಕಾಗಿವೆಯೆಂದು

ಚಿಂತೆಗಳೆಷ್ಟೇ ಇರಲಿ ಮನದ ಮೂಲೆಯಲ್ಲೊಂದು
ತೋಷಕ್ಕೆ ಕಾರಣವಿಹುದು

ಮನಸ ದುಗುಡ ಕಳೆಯೆ ತನುಮನ ಹಗುರಾಗುವುದು
ಮಳೆ ಸುರಿಸಿ ಹಗುರಾದ ಬಾನಿನಂತೆ ಎಂದೂ...



ಸ್ವರ್ಣ ಮಹೇಶ್
ಸಾಲಿಕೇರಿ



# ಜೋಗದ ಜಲಧಾರೆ

ಅಬ್ಬರದಿಂದಲಿ ಸಲಿಲದ ಧಾರೆಯು
ಹಬ್ಬವು ಜೋಗದ ಜಲಪಾತ |
ಅಬ್ಬೆಯ ತಬ್ಬಲು ಎತ್ತರ ಜಿಗಿತವು
ಕಬ್ಬವು ಜೋಗದ ಜಲಪಾತ || ಪ ||

ಮಿತ್ರರ ನಡುವಲಿ ಪಂಥವು ಸರಿಯೇ
ಡಮಡಮ ಡಮರುಗ ಎದೆಯಲ್ಲಿ |
ಯಾತ್ರೆಯು ಎಲ್ಲಿಗೆ ಹೇಳು ಶರಾವತಿ
ನಮಿಸುತ ಸಾಗಿದೆ ಮುದದಲ್ಲಿ ||

ಸಾಗರವಿಲ್ಲೇ ಸೇರಿದ ಹಾಗಿದೆ
ಜೋಗುಳ ಹಾಡಿದ ಮಳೆರಾಜ |
ಮೇಘಗಳೆಡೆಯಲಿ ಇಣುಕುತ ಹರಿಸಿದ
ಕಾಮನ ಬಿಲ್ಲನು ಭಗರಾಜ ||

ಬೆಳ್ಳಿಯ ರಾಶಿಯೆ ಬೆಳ್ನನೆ ಪುಷ್ಪವೆ
ಕಾಂಬುವ ಕಣ್ಣಿನ ಔತಣವೇ |
ಹಳ್ಳವ ಕೊಳ್ಳವ ಸೇರುವ ಆತುರ
ನಂಬಿದ ಜೀವದ ಸಂಭ್ರಮವೇ ||

ಧನ್ಯವು ಮಾನ್ಯವು ಸೃಷ್ಟಿಯ ದೃಶ್ಯವು
ಶೂನ್ಯವು ಮಾನವ ಪಂಥ್ಯದಲೀ |
ಪುಣ್ಯವು ಜೀವನ ಚಿಗುರಲಿ ಚೇತನ
ಅನ್ಯವು ಬಾರದು ಯಾತ್ರೆಯಲೀ ||



**ಶೋಭಾ ಹರಿಪ್ರಸಾದ ಶೆಟ್ಟಿಗಾರ**
**ಉಡುಪಿ**

# ಬೀಡಿ ಕಟ್ಟುವ ಕಾಯಕ

ಬಿಡಿ- ಬಿಡಿಯಾಗಿ ಕಚ್ಚಾ ಸಾಮಗ್ರಿಯ
ಕರದೊಳೊದಗೆ ಕರೆತಂದು;
ಬಾಲೆಯಂದದಿ ತನ್ನ ತೊಡೆಯಲ್ಲಿಟ್ಟು;
ತಟ್ಟಿ ಕಟ್ಟುವೆವು - ನಾವು ಕಟ್ಟುವೆವು;
ಉದರ ಪೋಷಣೆಯ ಹುಟ್ಟುಹಾಕುವ - ನಶೆ ಬೀಡಿಯನು!

ಎಳೆ-ಎಳೆ ಎಲೆ ತರಗೆಲೆಯ ಕಲೆ;
ನಶೆ ಹೊಗೆಸೊಪ್ಪಿನ ಪುಡಿ ಹಿಡಿ ಒಂದೆಡೆ;
ಒಪ್ಪ ಓರಣದಿ ಕರ ಕೌಶಲತೆಯ ಮೆರೆವ;
ಸುರು-ಸುರುಳಿ ಹಿಡಿ ಬೀಡಿಯನು -
ಬಿಡದೆ ಕಟ್ಟುವೆವು -
ಏಕತಾನತೆಯ ದಟ್ಟ ಕಟ್ಟಿಬದ್ದ ಬಿಡಾರದೊಳ ಒಳ-ಒಳಗೆ;
ಕಟ್ಟುವೆವು ನಾವು ಕಟ್ಟುವೆವು;
ಉದರ ಪೋಷಣೆಯ ಹುಟ್ಟುಹಾಕುವ - ನಶೆ ಬೀಡಿಯನು!

ಹನಿ-ಹನಿಗೂಡಿ ಹಳ್ಳ ತೆನೆ-ತೆನೆಗೂಡಿ ಬಳ್ಳ;
ಒಂದೊಂದೇ ಸೇರಿ ಸೇರಿ, ಸಾವಿರಕ್ಕೆ ಏರುವ ಈ ಪರಿ -
ಸಂಯಮ ತಾಳ್ಮೆಗೂ ಇದು ಒಂದು ಹಾದಿ....
ಕಟ್ಟುವೆವು ನಾವು ಕಟ್ಟುವೆವು;
ಉದರ ಪೋಷಣೆಯ ಹುಟ್ಟುಹಾಕುವ - ನಶೆ ಬೀಡಿಯನು!

ಬೆನ್ನ ನಡು ಕುಯಿ-ಕುಯಿದು ನಲುಗುತಿರೆ;
ನಡು ಕತ್ತು ತಿವಿಯುತಿರೆ; ಬೇನೆಯಲಿ ಆ..! ಜೀವನಾಡಿ
ಸೋತಿರಲು; ಮುಗಿಯದಿದು ಮುಗಿಯದಿದು ಇನ್ನೂ-
ಕಟ್ಟಿ ಕಟ್ಟಿಯೂ, ಕಟ್ಟಿಸದದು - ತನ್ನ ನೆಲೆಯ ಮೇರು ಕನಸುಗಳ......!!



**ಎಕ್ಕಾರ್ ಡಿ. ಪಿ. ಶೆಟ್ಟಿಗಾರ್**
**ಶೇಷಾದ್ರಿಪುರಂ, ಬೆಂಗಳೂರು**


AI generated image: No photo credits required

# ಕಿಚ್ಚಿನ ಅಲೆಯೇರಿ

ವರ್ಗಾವಣೆಯಾಗುತ್ತಾ ಇರುವ ನೌಕರಿಯಲ್ಲಿ ನನ್ನವರು ಇದ್ದುದರಿಂದ ನಾವು ಹಲವಾರು ಊರುಗಳಲ್ಲಿ ಇದ್ದು ಅಲ್ಲಿಯ ಅನುಭವಗಳನ್ನು ನಮ್ಮ ಜೊತೆಗೆ ಹೊತ್ತು ತಂದಿದ್ದೇವೆ. ನಾವು ಅಂದರೆ ನಾನು, ನನ್ನ ಪತಿದೇವರು ಮತ್ತು ಮುದ್ದಾದ ಒಂದು ಹೆಣ್ಣು ಮತ್ತು ಒಂದು ಗಂಡು ಮಕ್ಕಳು. ಎಲ್ಲ ಕಡೆಯ ಅನುಭವಗಳಿಂದ ತಿಳಿದು ಬರುವುದೇನೆಂದರೆ ಆಚಾರ, ವಿಚಾರ, ರೀತಿ, ನೀತಿ ಬೇರೆ ಇದ್ದರೂ ಪ್ರೀತಿ ವಾತ್ಸಲ್ಯ ಮತ್ಸರದ ವಿಷಯ ಎಲ್ಲ ಕಡೆಗಳಲ್ಲೂ ಒಂದೇ ರೀತಿಯಾಗಿರುತ್ತದೆ. ಅದರಲ್ಲೂ ಮತ್ಸರ ಎಲ್ಲಿ ಹೋದರೂ ತನ್ನ ಬಲೆ ಬೀಸಿರುತ್ತದೆ. ಅದಕ್ಕೆ ಒಂದು ಊರಿನಲ್ಲಿ ಆದ ಈ ಅನುಭವ ನನ್ನನ್ನು ಯಾವಾಗಲೂ ಕಾಡುತ್ತಿರುತ್ತದೆ.

ನಾವು ಆ ಊರಿಗೆ ಹೋಗಿ ಒಂದು ವರ್ಷದ ಮೇಲೆ ನಮ್ಮ ಪಕ್ಕದ ಮನೆಗೆ ಪ್ರೀತಿ ಮತ್ತು ಅವಳ ಪತಿ ನರೇಶ್, ಮಕ್ಕಳು ನಿತಿನ್, ನಿಖಿಲ್ ಬಂದು ನೆಲೆಸತೊಡಗಿದರು. ಬಂದ ದಿನವೇ ಪ್ರೀತಿ ಮನೆಗೆ ಬಂದು ನಮ್ಮ ಪರಿಚಯ ಮಾಡಿಕೊಂಡಳು. ಕೂಡುಕುಟುಂಬದಲ್ಲಿದ್ದರೆ ತುಂಬಾ ದುಡ್ಡು ಖರ್ಚಾಗುತ್ತದೆ. ನಾವು ಪ್ರತ್ಯೇಕವಾಗಿ ಇರೋಣ ಅಂತ ಈಗ ಇಲ್ಲಿ ಬಂದು ಇರತೊಡಗಿದ್ದಾರೆ ಎಂದು ಅವಳ ಮಾತಿನಿಂದ ತಿಳಿಯಿತು. ದಿನ ಕಳೆದ ಹಾಗೆ ನಮ್ಮ ಮನೆಗೆ ಅವಳ ಭೇಟಿ ನಿರಂತರ ಸಾಗತೊಡಗಿತು. ಅವಳ ಮಾವನ ಮನೆಯಲ್ಲಿ ಅವಳ ಹಿರಿಯ ಭಾವನೇ ಎಲ್ಲಾ ಜವಾಬ್ದಾರಿ ಹೊತ್ತು ಕೊಂಡಿದ್ದರು. ಈಗ ಅವರಿಗೆ ವರ್ಗಾವಣೆಯಾಗಿ ತಮ್ಮ ಸಂಸಾರದೊಂದಿಗೆ ಬೇರೆ ಊರಿಗೆ ಹೊರಟಿದ್ದಾರೆ. ಇವರಿಬ್ಬರು ಅನ್ನೂ ಅಲ್ಲಿ ಇದ್ದರೆ ಎಲ್ಲಾ ಜವಾಬ್ದಾರಿ ತಮ್ಮ ಮೇಲೆ ಬರಬಹುದೆಂದು ಬೇಗ ನುಣುಚಿಕೊಂಡು ಇಲ್ಲಿಗೆ ಬಂದಿದ್ದಾರೆ. ಆ ಮನೆಯಲ್ಲಿ ವೃದ್ಧ ತಂದೆ ತಾಯಿ, ತಮ್ಮ, ತಂಗಿ ಇದ್ದಾರೆ. ಹಿರಿಯಣ್ಣನ ರೀತಿ ತಾನೂ ಜವಾಬ್ದಾರಿ ಹೊತ್ತುಕೊಂಡು ಮನೆ ನಡೆಸಬೇಕೆನ್ನುವ ತಿಳುವಳಿಕೆ ನರೇಶನಿಗೆ ಇಲ್ಲ. ಮೊದಲು ನಾವು ದುಡ್ಡು ಒಟ್ಟು ಮಾಡಿ ಗಟ್ಟಿಯಾಗಬೇಕು. ಆ ಮೇಲೆ ಉಳಿದರೆ ಎಲ್ಲರನ್ನು ನೋಡಿಕೊಳ್ಳೋಣ ಎನ್ನುವ ವಾದ ಆತನದ್ದು. ಅವನಿಗೆ ಸರಿಯಾದ ಪತ್ನಿ ಪ್ರೀತಿ. ಇಬ್ಬರಿಗೂ ದುಡ್ಡು ಒಟ್ಟು ಮಾಡುವುದೇ ಧ್ಯೇಯವಾಗಿದೆ. ಪ್ರೀತಿಗೆ ದೊಡ್ಡ ಕೆಲಸದಲ್ಲಿರುವ ತನ್ನ ಭಾವ, ವಿದ್ಯಾವಂತೆ ಬುದ್ಧಿವಂತೆಯಾದ ಅವರ ಹೆಂಡತಿಯ ಮೇಲೆ ಮತ್ಸರ. ತಾವು ಅವರಿಗಿಂತ ಮೇಲೆ ಹೋಗಬೇಕೆನ್ನುವ ಬಯಕೆ. ಯಾವಾಗ ಮಾತನಾಡಲು ಬಂದರೂ ಭಾವನಿಗೆ, ಓರಗಿತ್ತಿಗೆ ಏನಾದರೂ ಹೇಳಿ ತೆಗಳದಿದ್ದರೆ ಪ್ರೀತಿಗೆ ನಿದ್ದೆಯೇ ಬರುತ್ತಿರಲಿಲ್ಲ. ಅವಳ ಈ ಒಂದು ಗುಣ ನನಗೆ ಹಿಡಿಸುತ್ತಾ ಇರಲಿಲ್ಲ. ನಾನು ಅವರವರು ಪಡೆದುಕೊಂಡು ಬಂದಿದ್ದು ಅವರವರಿಗೆ ಅನ್ನುವ ಜಾಯಮಾನದವಳು. ಪ್ರೀತಿಯ ನಡತೆ ನನಗೆ ಹಿಡಿಸದಿದ್ದರೂ, ಏನೋ ಅವಳಿಗೆ ನನ್ನ ಹತ್ತಿರ ಹೇಳುವುದರಿಂದ ಸಮಾಧಾನ ಆಗುವುದಾದರೆ ಆಗಲಿ ಎಂದು ಅವಳ ಮಾತಿಗೆ ಕಿವಿ ಕೊಡುತ್ತಾ ಇದ್ದೆ. ಮಾವನ ಮನೆ ಅಷ್ಟು ಹತ್ತಿರ ಇದ್ದರೂ ಹೋಗಿ ಅವರೆಲ್ಲರ ಯೋಗಕ್ಷೇಮ ವಿಚಾರಿಸಿಕೊಂಡು ಬರಬೇಕೆಂದು ಪ್ರೀತಿಗೆ ಆಗಲಿ ಅವಳ ಪತಿಗೆ ಆಗಲಿ ತಿಳಿಯುತ್ತಿರಲಿಲ್ಲ. ಅದೇ ರಜೆಯಲ್ಲಿ ಅವಳ ಭಾವ ಬಂದಿದ್ದಾರೆ, ಒಂದು ತಿಂಗಳು ಇರುತ್ತಾರೆ ಅಂತ ಗೊತ್ತಾದ ತಕ್ಷಣ, ಗಂಡ ಹೆಂಡತಿ ಮನೆಗೆ ಹೋಗಿ ತುಂಬಾ ದಿನ ಆಯ್ತು. ಹೋಗಿ ಹಿರಿಯರನ್ನು ನೋಡಿಕೊಂಡು ಬರುತ್ತೇವೆ ಅಂತ ಹೋದವರು ಒಂದು ತಿಂಗಳು ಅಲ್ಲೇ ಝಂಡಾ ಊರುತ್ತಾರೆ. ಆ ಮೇಲೆ ಬಂದ ಮೇಲೆ "ಒಂದು ತಿಂಗಳು ಖರ್ಚೇ ಇರಲಿಲ್ಲ. ಆ ದುಡ್ಡಿನಲ್ಲಿ ಮನೆಗೆ ಬೇಕಾದ ವಸ್ತುಗಳನ್ನು ತಂದೆ" ಎಂದು ಪ್ರೀತಿಯ ಜಂಭ ಬೇರೆ. ಇದನ್ನೆಲ್ಲಾ ಕೇಳುವಾಗ ಪ್ರೀತಿಯ ಅಕ್ಕ ಭಾವನ ಮೇಲೆ ನನಗೇ ಮರುಕ ಹುಟ್ಟುತ್ತಿತ್ತು. ಪಾಪದವರು ಹಿರಿಯರಾಗಿ ಮನೆಯ ಜವಾಬ್ದಾರಿ ಹೊತ್ತುಕೊಳ್ಳುವುದರ ಜೊತೆಗೆ ಇಂತಹವರ ಜವಾಬ್ದಾರಿಯನ್ನೂ ನಿಭಾಯಿಸಬೇಕು. ನಿಜವಾಗಿಯೂ ಅವರ ಗುಣ ದೊಡ್ಡದು. ತಮ್ಮನ ಮನೆಗೆ ಬರಬೇಕೆಂಬ ಆಸೆ ಇದ್ದರೂ ಇವರೇ ಅಲ್ಲಿಗೆ ಹೋಗುವುದರಿಂದ ಅವರಿಗೆ ಬರುವ ಅವಕಾಶವೇ ಇರುತ್ತಿರಲಿಲ್ಲ. ನನಗೆ ಒಂದು ಕುತೂಹಲ ಇತ್ತು. ಪ್ರೀತಿ ಇಷ್ಟೆಲ್ಲಾ ಭಾವನ ಹೆಂಡತಿಯ ವರ್ಣನೆ ಮಾಡಿದ್ದಾಳಲ್ಲಾ, ಒಂದು ಸಾರಿ ಅವರನ್ನು ಪ್ರತ್ಯಕ್ಷ ನೋಡಬೇಕೆನ್ನುವ ಆಸೆ. ಗಂಡನ ಕಡೆಯಿಂದ ಯಾರು ಬಂದರೂ "ನಮ್ಮ ಕಷ್ಟ ಯಾರಿಗೂ ಅರ್ಥವಾಗುವುದಿಲ್ಲ. ಅವರೆಲ್ಲ ಬಂದಾಗ ನಮಗೆ ಎಷ್ಟು ಖರ್ಚು ಆಗುತ್ತದೆ. ಎಲ್ಲಾ ಬರ್ತಾ ಇರ್ತಾರೆ" ಎಂದು ಬೊಬ್ಬೆ ಹೊಡೆಯುವ ಪ್ರೀತಿಗೆ ಅವಳ ಕಡೆಯವರು ಬಂದು ಒಂದು ವಾರ ಇದ್ದರೂ ಖರ್ಚೇ ಆಗುವುದಿಲ್ಲ ಎನ್ನುವಷ್ಟು ಅವರಿಗೆ ಉಪಚಾರ ಮಾಡ್ತಾ ಇರ್ತಾಳೆ. ಒಂದು ಸಾರಿ ಅವಳ ಅಕ್ಕ ಭಾವ ಬಂದಾಗ ನಮ್ಮ ಮನೆಗೆ ಅಕ್ಕನನ್ನು ಕರೆದುಕೊಂಡು ಬರಲೇ ಇಲ್ಲ. ಯಾಕೆ ಎಂದು ಆ ಮೇಲೆ ಕೇಳಿದರೆ "ಅವರಿಗೆ ತುಂಬಾ ಜಂಭ. ಯಾರ ಮನೆಗೂ ಹೋಗುವುದಿಲ್ಲ. ನಾನು ಹೋಗೋಣ ಅಂತ ತುಂಬಾ ಹೇಳಿದೆ. ಆದರೂ ಕೇಳಲಿಲ್ಲ" ಅಂತ ಅವರ ತಲೆಯ ಮೇಲೆಯೇ ಗೂಬೆ ಕೂರಿಸಿದಳು. ಇರಲಿ ಅಂತ ನಾನೂ ಸುಮ್ಮನಿದ್ದೆ.

ಅವಳ ತೌರಿನವರು ಯಾರು ಬಂದರೂ ನಮ್ಮ ಮನೆಗೆ ಅವರನ್ನು ಎಳೆದುಕೊಂಡಾದರೂ ಬರುತ್ತಿದ್ದು, ಮನೆ ತುಂಬಾ ಸಾಮಾನು ಕೈ ತುಂಬಾ ದುಡ್ಡು ಸೇರಿದ ಮೇಲೆ ಎಲ್ಲರೂ ತಮ್ಮ ಮನೆಗೆ ಬರಬೇಕು, ತಮ್ಮ ದೊಡ್ಡಸ್ತಿಕೆಯನ್ನು ಅವರ ಮುಂದೆ ಮೆರೆಸಬೇಕು ಎನ್ನುವ ಧ್ಯೇಯ ಪ್ರೀತಿಗೆ ಶುರು ಆಯಿತು. ಅದಕ್ಕೆ ಇಂಬು ಕೊಡುವಂತೆ ಒಂದು ಸಾರಿ ಊರಿಗೆ ಹೋಗಿ ತಂದೆ ತಾಯಿಯನ್ನು ನರೇಶ ಕರೆದುಕೊಂಡು ಬಂದೇ ಬಿಟ್ಟನು. ಮಗ ಸೊಸೆ ಸೇರಿ ಉಪಚಾರ ಮಾಡಿದ್ದೆ ಮಾಡಿದ್ದು. ಅತ್ತೆಯವರನ್ನು ನಮ್ಮ ಮನೆಗೂ ಕರೆದುಕೊಂಡು ಬಂದಳು. ಏನೋ ಕೆಲಸದ ನೆನಪಾಗಿ ಅತ್ತೆಯವರನ್ನು ಬಿಟ್ಟು ಮನೆಗೆ ಹೋದವಳು ಎಷ್ಟು ಹೊತ್ತಾದರೂ ಬರಲಿಲ್ಲ.

ಅವಳ ಅತ್ತೆಯವರು ಸೌಮ್ಯ ಸ್ವಭಾವದ ಹೆಂಗಸು. ನನ್ನ ಜೊತೆಗೆ ಚೆನ್ನಾಗಿ ಮಾತನಾಡಿದರು. ತಮ್ಮ ಹಿರಿಮಗನೇ ನರೇಶನಿಗೆ ವ್ಯಾಪಾರ ಮಾಡಲು ಧನ ಸಹಾಯ ಮಾಡಿದ ವಿಷಯವನ್ನು ತಿಳಿಸಿದರು. ಈ ವಿಷಯ ತಿಳಿದ ಮೇಲೆ ನನಗೆ ಪ್ರೀತಿ ಮತ್ತು ನರೇಶರ ಮೇಲೆ ಒಂದು

ರೀತಿಯ ಜಿಗುಪ್ಸೆ ಉಂಟಾಯಿತು. ಎಂಥ ಮನುಷ್ಯರು! ತಮ್ಮ ಜೀವನವನ್ನು ರೂಪಿಸಿದವರ ಬಗ್ಗೆ ಒಂದು ಒಳ್ಳೆಯ ಮಾತೂ ಆಡದವರು ತಾವು ಏರಿ ಬಂದ ಏಣಿಯನ್ನು ಜಾಡಿಸಿ ಒದೆಯುವವರು ಮನುಷ್ಯರೇ ಅಲ್ಲ ಮೃಗಗಳು ಎಂದು ನನ್ನ ಮನಸ್ಸಿನಲ್ಲಿಯೇ ಗೊಣಗುತ್ತಿದ್ದೆ.

ಇದರ ನಂತರ ನನಗೆ ಪ್ರೀತಿಯ ಜೊತೆಗೆ ಮೊದಲಿನಂತೆ ವ್ಯವಹರಿಸಲು ಆಗಲೇ ಇಲ್ಲ. ಅವಳಿಗೂ ಇದರ ಬಿಸಿ ತಟ್ಟಿರಬೇಕು. ಬೇರೆಯವರ ಹತ್ತಿರ ನನ್ನ ದೂರು ಹೆಚ್ಚಾಗತೊಡಗಿತು. ನನಗೆ ಅವಳ ಮೇಲೆ ಹೊಟ್ಟೆಕಿಚ್ಚು ಶುರು ಆಗಿದೆಯಂತ ಎಲ್ಲರ ಹತ್ತಿರ ಹೇಳತೊಡಗಿದಳು. ಆದರೆ ಈ ರೀತಿಯ ಪ್ರಚಾರ ನನ್ನ ಮೇಲೆ ಯಾವ ಪರಿಣಾಮವನ್ನೂ ಬೀರಲಿಲ್ಲ. ಹೀಗೆಯೇ ದಿನಗಳು ಉರುಳುತ್ತಿದ್ದವು.

ಈ ಸಾರಿ ಅವಳ ಭಾವ ಅಕ್ಕನವರು ಬಂದಾಗ ಪ್ರೀತಿ ಎಲ್ಲಿಗೋ ಹೋಗಿದ್ದುದರಿಂದ ಅವರು ಮನೆಯ ಬಾಗಿಲಲ್ಲಿ ಕುಳಿತಿದ್ದುದನ್ನು ನೋಡಿ ನಾನೇ ಹೋಗಿ ಅವರನ್ನು ನನ್ನ ಮನೆಗೆ ಆಹ್ವಾನಿಸಿದೆ. ಮೊದಲು ಸಂಕೋಚ ಪಟ್ಟುಕೊಂಡರೂ ಇಬ್ಬರೂ ದಣಿದಿದ್ದುದರಿಂದ ನಮ್ಮ ಮನೆಗೆ ಬಂದರು. ಮೊದಲ ನೋಟದಲ್ಲಿಯೇ ಪ್ರೀತಿಯ ಓರಗಿತ್ತಿ ನನ್ನ ಮನ ಸೆಳೆದರು. ಅಷ್ಟೇನೂ ರೂಪವಂತೆ ಅಲ್ಲದಿದ್ದರೂ ತಮ್ಮ ಮುಗ್ಧ ನಗು, ಮೃದು ಮಾತಿನಿಂದ ನನ್ನ ಮನ ಗೆದ್ದರು. ಪ್ರೀತಿಯ ಭಾವನವರೂ ಅಷ್ಟೆ. ಅವರ ನಡೆನುಡಿಗಳಿಂದ ಅವರೊಬ್ಬ ಸುಸಂಸ್ಕೃತ ವ್ಯಕ್ತಿ ಎಂದು ಗೊತ್ತಾಗುತ್ತಿತ್ತು. ಅವರನ್ನು ದೂರದರ್ಶನ ನೋಡಲು ಬಿಟ್ಟು ನಾನು ಮತ್ತು ಪ್ರೀತಿಯ ಓರಗಿತ್ತಿ ಅಡುಗೆ ಮನೆಗೆ ತೆರಳಿದೆವು. ನಮ್ಮ ಭೇಟಿಯಾದ ಕೆಲವೇ ನಿಮಿಷಗಳಲ್ಲಿ ನಾವಿಬ್ಬರೂ ಆತ್ಮೀಯ ಗೆಳತಿಯರಾಗಿ ಬಿಟ್ಟಿದ್ದೆವು. ನಮ್ಮ ಗುಣಗಳಲ್ಲಿ ತುಂಬಾ ಸಾಮ್ಯ ಇದ್ದುದೇ ಇದಕ್ಕೆ ಕಾರಣವೆಂದು ತಿಳಿಯಬಹುದು. "ಕಳೆದ ಸಾರಿ ಬಂದಾಗ ನಮ್ಮ ಮನೆಗೆ ಯಾಕೆ ಬರಲಿಲ್ಲ?" ಎಂದು ಕೇಳಿದ್ರೆ "ನನಗೆ ನಿಮ್ಮನ್ನು ಭೇಟಿಯಾಗಬೇಕೆಂದು ಆಸೆ ಇತ್ತು" ಎಂದು ಅವರು ಹೇಳಿದ ಮಾತು ನನಗೆ ಎಲ್ಲವನ್ನು ತಿಳಿಸಿತು. ಅವರಿಬ್ಬರಿಗೆ ಚಹಾ ತಿಂಡಿ ಕೊಟ್ಟು ಸುಮಾರು ಎರಡು ಗಂಟೆಗಳ ಕಾಲ ಅವರ ಜೊತೆಗೆ ಕಳೆದ ಸಮಯದಲ್ಲಿ ಒಂದೇ ಒಂದು ಕೆಟ್ಟ ಪದವನ್ನು ಅವರು ಪ್ರೀತಿಗಾಗಲಿ, ನರೇಶನಿಗಾಗಲಿ ಆಡಲಿಲ್ಲ. ಎಲ್ಲರೂ ಚೆನ್ನಾಗಿರಬೇಕು ಎನ್ನುವ ಅವರ ಮಾತೇ ಅವರ ಮನಸ್ಸನ್ನು ತಿಳಿಸುತ್ತದೆ.

ಪ್ರೀತಿ ಮನೆಗೆ ಬಂದಾಗ ನಾನೇ ಅವಳನ್ನು ಕರೆದು ಅವಳ ಭಾವ ಮತ್ತು ಓರಗಿತ್ತಿ ನಮ್ಮ ಮನೆಯಲ್ಲಿ ಇದ್ದಾರೆ ಎಂದು ತಿಳಿಸಿದೆ. ಈ ವಿಷಯ ತಿಳಿದು ಅವಳ ಮುಖದ ಬಣ್ಣವೇ ಬದಲಾಯಿತು. "ಅವರಿಗೆ ಮೊದಲೇ ತಿಳಿಸಿ ಬರಲಿಕ್ಕೆ ಆಗಿಲ್ವಾ? ಈಗ ಯಾರ ಯಾರ ಮನೆಯಲ್ಲಿ ಹೋಗಿ ಕುಳಿತುಕೊಂಡಿದ್ದಾರೆ" ಅಂತ ಗುಣುಗುಣು ಹೇಳುತ್ತಾ ನಮ್ಮ ಮನೆಗೆ ಬಂದು ಭಾವ ಮತ್ತು ಓರಗಿತ್ತಿಯನ್ನು ಕರೆದುಕೊಂಡು ಹೋದಳು. ಅವರಿಬ್ಬರೂ ಮರುದಿನ ಬೆಳಿಗ್ಗೆ ಅವರ ಊರಿಗೆ ಹೊರಟರು. ಹೊರಡುವ ಮೊದಲು ಅವಳ ಓರಗಿತ್ತಿ ಬಂದು ನನಗೆ ಹೇಳಿ ಹೋಗಲು ಮರೆಯಲಿಲ್ಲ. ಅವರ ಸೌಜನ್ಯ ನನಗೆ ತುಂಬಾ ಹಿಡಿಸಿತು. ಅವರು ಹೋದ ಮೇಲೆ ಪ್ರೀತಿ ಬಂದು "ಒಂದು ದಿನ ಕುಳಿತುಕೊಳ್ಳಿ ಅಂದ್ರೆ ಕೇಳುವುದಿಲ್ಲ. ಅವರಿಗೆ ನಮ್ಮ ಮೇಲೆ ಹೊಟ್ಟೆಕಿಚ್ಚು. ಅವರಿಗಿಂತ ಈಗ ನಾವೇ ಮೇಲೆ ಹೋಗ್ತಾ ಇದ್ದೇವಲ್ಲ. ಅದಕ್ಕೆ ತುಂಬಾ ಜಂಭ ಇತ್ತು. ನನ್ನ ಓರಗಿತ್ತಿಗೆ ಈಗ ಜಂಭ ಎಲ್ಲ ಇಳಿಯುವ ಹಾಗೆ ನಾವೂ ಎಲ್ಲ ಮನೆ ಸಾಮಾನು ತೆಗೆದುಕೊಂಡಿದ್ದೇವೆ. ಜಂಭದ ಕೋಳಿ ಆ ನನ್ನ ಓರಗಿತ್ತಿ" ಹಾಗೆ ಹೀಗೆ ಅಂತ ಭಾವ ಮತ್ತು ಓರಗಿತ್ತಿಗೆ ಬೈಯಲು ಶುರು ಮಾಡಿದಾಗ ನನಗೆ ತಡೆಯಲಾಗಲಿಲ್ಲ. "ಪ್ರೀತಿ ಸ್ವಲ್ಪ ಸುಮ್ಮನಿರಿ. ನಿಮ್ಮ ಸ್ವಭಾವ ಏನು ಅಂತ ಈ ಎರಡು ವರ್ಷಗಳಿಂದ ಗಮನಿಸಿದ್ದೇನೆ. ನಿಮ್ಮ ಭಾವ ಓರಗಿತ್ತಿಯ ಸ್ವಭಾವ ಅವರು ನಮ್ಮ ಜೊತೆಗೆ ಇದ್ದ ಒಂದು ಗಂಟೆಯಲ್ಲಿಯೇ ಗೊತ್ತಾಯಿತು. ದೇವರಂತಹ ಅವರ ಮೇಲೆ ಯಾಕೆ ಈ ರೀತಿ ಮತ್ಸರ ಪಡುತ್ತೀರಿ. ನೀವು ಎಲ್ಲಾ ಸಾಮಾನು ಮಾಡಬಹುದು, ದುಡ್ಡು ಒಟ್ಟು ಮಾಡಬಹುದು. ಆದರೆ ಅವರಿಬ್ಬರಲ್ಲಿರುವ ಚಿನ್ನದಂತಹ ಗುಣಗಳನ್ನು ಪಡೆಯಲು ಸಾಧ್ಯವಿಲ್ಲ. ಇನ್ನು ನನ್ನ ಹತ್ತಿರ ಯಾವ ವಿಷಯವನ್ನೂ ಹೇಳಬೇಡ" ಅಂತ ಕಡ್ಡಿ ತುಂಡು ಮಾಡಿದ ಹಾಗೆ ಹೇಳಿಬಿಟ್ಟೆ. ಈ ಮಾತು ಅವಳಿಗೆ ಕೆನ್ನೆಗೆ ಹೊಡೆದ ಹಾಗೆ ಆಗಿರಬೇಕು. ಅವತ್ತು ತಿರುಗಿ ಮನೆಗೆ ಹೋದವಳು ಮತ್ತೆ ಎಂದೂ ನಮ್ಮ ಮನೆಗೆ ಬರಲಿಲ್ಲ. ಎದುರಿಗೆ ಸಿಕ್ಕಿದರೂ ಮುಖ ತಿರುಗಿಸಿಕೊಂಡು ಹೋಗುತ್ತಿದ್ದಳು. ನನಗೂ ಅವಳಂತಹ ಸ್ನೇಹಿತೆಗಿಂತ ಸುಮ್ಮನೆ ಇರುವುದೇ ಮೇಲು ಅನ್ನಿಸಿದ್ದುದರಿಂದ ನಾನೂ ಸುಮ್ಮನಿದ್ದೆ. ನಮಗೂ ಅಲ್ಲಿಂದ ವರ್ಗಾವಣೆ ಆದುದರಿಂದ ಅವಳು ಈಗ ಬರೀ ನೆನಪಾಗಿ ಉಳಿದಿದ್ದಾಳೆ. ಆದರೂ ಅವಳು ಮುಖ ತಿರುಗಿಸಿಕೊಂಡು ಹೋಗಿದ್ದು ನೆನಪಾದ್ರೆ ಈಗಲೂ ನಗು ಬರುತ್ತದೆ.



**ಪ್ರೇಮನಾರಾಯಣ**
**ವಿಶ್ವಪ್ರಿಯನಗರ, ಬೆಂಗಳೂರು**



# ಪಾರಿಜಾತ ಗಿಡವನ್ನು ಬೀಜದಿಂದ ಬೆಳೆಸುವ ವಿಧಾನ



ಹೊದಿಕೆ ಇರುವ ಪಾರಿಜಾತದ



ಪಾರಿಜಾತದ ಬೀಜಗಳು



ಬೀಜವನ್ನು ಒಂದು ದಿನ ರಾತ್ರಿ ನೆನೆಸುವುದು. ಮರುದಿನ ನೀರನ್ನು ಬಸಿದು ಮೊಳಕೆ ಬರಿಸುವುದು.



ಪಾಂಟಿಂಗ್ ಮಿಕ್ಸ್ ಇರುವ



ಪಾಟಿನಲ್ಲಿ ಬೆಳೆದ ಪಾರಿಜಾತ

ಹೊದಿಕೆ ಇರುವ ಪಾರಿಜಾತ ಬೀಜದಿಂದ ಪಾರಿಜಾತ ಬೀಜವನ್ನು ತೆಗೆದು, ಮೊಳಕೆ ಬರಿಸಿ, ಪಾಂಟಿಂಗ್ ಮಿಕ್ಸ್ ಇರುವ ಪಾಟ್ ನಲ್ಲಿ ಹಾಕಿ, ಮೇಲೆ ತೆಳುಮಣ್ಣು ಹರಡುವುದು. ಮಣ್ಣಿನಲ್ಲಿ ತೇವಾಂಶ ಇರುವ ಹಾಗೆ ನೋಡಿಕೊಳ್ಳುವುದು.



**ನಾಗಪ್ಪ ನಟರಾಜ,**
**ರಿಟೈರ್ಡ್ ಎಕ್ಸಿಕ್ಯುಟಿವ್ ಎಂಜಿನಿಯರ್**
**ಬಸವನಗುಡಿ, ಬೆಂಗಳೂರು**

Image courtesy of the author



Image courtesy of the author

# ತುಡಿತ

ಆಷಾಢವೆಂದು ಆಕೆ
ತವರು ಸೇರಿದಳಂದು.
ಒಂಟಿಯಾಗಿಹೆನು ನಾನಿಲ್ಲಿ
ಜಂಟಿಯಾಗಲು ಕಾದಿರುವೆನಿಂದು.

ಸೀದಾ ಸಾದದ ಹುಡುಗಿ
ಏನನ್ನು ಕೇಳುವವಳಲ್ಲ
ಏನನ್ನು ಬೇಡುವವಳಲ್ಲ.
ಸಂಜೆಯಾದರೆ ನನ್ನದೇ ನೆನಪವಳಿಗೆ.

ಸತತ ಸುರಿವ ಮಳೆಗೆ
ಹಿಮದಿ ಮೈ ಮರಗಟ್ಟಿರಲು
ಹಂಡೆ ನೀರನು ಕಾಯಿಸಿ
ಕಾಯುವವಳು ದಿನವು.

ಮೊಲ್ಲೆ ಮಾಲೆಯ ತಂದು
ತುರುಬಿಗೆ ಮುಡಿಸುವವನೆಂದು
ಬಾಗಿಲಲಿ ನಿಂತು ನಸುನಗುವಳು
ಜಡೆಯನು ಎದೆಯ ಮೇಲಿಳಿಸಿ.

ಉಳಿದರುಳಿಯಲಿ ಕೆಲಸ
ನಾಳೆ ಮಾಡಿದರಾಯ್ತು
ಹೋಗಿ ಬರುವೆನು ನಾನು
ಅವಳೂರಿನಲಿ  ಒಂದಿನವಿದ್ದು.



**ಜಗದೀಶರಾಂ ಶೆಟ್ಟಿಗಾರ್,**
**ಜಪ್ತಿ, ಕುಂದಾಪುರ**



AI generated image: No photo credits required

# ಮದುಮಗಳು

ಮೊಗದಲ್ಲಿ ರಂಗೇರಿದ ಮದುಮಗಳ ಮಿಂಚುವ ಕಳೆ
ಕೈತುಂಬ ಝಣಗುಟ್ಟುವ ಬಂಗಾರ ಗಾಜಿನ ಬಳೆ
ಸಂತಸ ಸಂಭ್ರಮದಿ ಧರಿಸುವಳು ಮೈತುಂಬಾ ಒಡವೆ
ಮನದಲಿ ಕನಸು ಕಾಣುವ ಸುಂದರಿ ಚೆಲುವೆ

ಮದುವಣಗಿತ್ತಿಯ ರೇಷ್ಮೆಯ ಸೀರೆಯ ನಡಿಗೆ
ಜಡೆಬಿಲ್ಲೆಯ ಕೆಂಪು ಗುಲಾಬಿ ಮಲ್ಲಿಗೆ
ಸಪ್ತಪದಿ ಜೊತೆ ಸೌಭಾಗ್ಯದ ಕರಿಮಣಿ ತಾಳಿ ಕೊರಳಲಿ
ಅರಶಿನ ಕುಂಕುಮದಿ ಕಾಲುಂಗರ ಜೊತೆಯಲಿ

ಬೈತಲೆ ಬೊಟ್ಟಿನ  ಮೆರುಗಿನ ಅಂದವು
ಮೂಗಿನ ನತ್ತಿನ ಹೊಳಪಿನ ಚಂದವು
ನಾಚುತ ತೂಗಿದ ಬೆಂಡೋಲೆ  ಜುಮಕವು ಕಿವಿಯೊಳು
ಹೊಳೆಯುವ ಹವಳದ ಉಂಗುರ ಕೈಜೋಡಿಸಿ ಬೆರಳೊಳು

ಮಾಣಿಕ್ಯ ಮಾಲೆಯ ಸೊಬಗಿನ ಐಸಿರಿ
ಮುತ್ತಿಡುವ ಮುತ್ತಿನ ಹಾರದ ವೈಖರಿ
ಹೆಣ್ಣೊಂದು ಸಾಂಸಾರಿಕ ಬಂಧನಕ್ಕೆ ಕಾಲಿಡುವ ಅಮೃತ ಘಳಿಗೆ
ಕಾಲ್ಗೆಜ್ಜೆಯ ಘಲ್ ಘಲ್ ನಾದದಲಿ ಕಾಲಿಟ್ಟಳು ಗಂಡನ ಮನೆಗೆ

ಮದುಮಗಳ ಮೊಗದಲಿ ಲಜ್ಜೆಯ ಅಂಬರದ ಕಳೆ
ಮದುವೆಯ ಅನುಬಂಧದಿ ಜೀವನದಿ ಪ್ರೀತಿಯ ಹೊಳೆ.....



**ಅನುರಾಧ ಉದಯ್**
**ಉಡುಪಿ**



# ಅಮ್ಮ

“ರೀ.. ಅಮ್ಮ ಇವತ್ತು ಬಚ್ಚಲು ಮನೆಯಲ್ಲಿ ಬಿದ್ದುಬಿಟ್ರಂತೆ. ಕಾಲಿಗೆ ಪೆಟ್ಟು ಬಿದ್ದು, ಆಸ್ಪತ್ರೆ ಸೇರಿದ್ರಂತೆ, ಮನೆಯಿಂದ ಈಗ ಫೋನ್ ಮಾಡಿದ್ದಾರೆ.”

“ಅಯ್ಯೋ ದೇವರೇ. .! ಎಷ್ಟು ಸಾರಿ ಹೇಳಿದ್ದೆ ಅವಳಿಗೆ. ಬಚ್ಚಲು ಮನೆಗೆ ನಿಧಾನವಾಗಿ ಹೋಗು ಅಂತ. ಏನೋ ಅವಳ ಗ್ರಹಚಾರ ಸರಿ ಇಲ್ಲ ಅಂತ ಕಾಣತ್ತೆ.

ಸರಿ, ನಾನು ಹೋಗಿ ಬರ್ತೀನಿ. ನನ್ನ ಬಟ್ಟೆ ರೆಡಿ ಮಾಡು.”

“ನೀವು ಮಗನಾಗಿ ಹೋಗುವುದೇನೊ ಸರಿ. ಆದರೆ ಅತ್ತೆ, ನನ್ನನ್ನು ಸೊಸೆಯೆಂದು ಕಂಡಿಲ್ಲ. ನಾನು ಹೆತ್ತ ಅಮ್ಮನ ಕಳಕೊಂಡು, ಈ ಮನೆಯ ಸೊಸೆಯಾಗಿ ಬಂದ ಮೇಲೆ, ಅವರಿಂದ ಅಮ್ಮನ ಪ್ರೀತಿ ಕಂಡೆ.

ನಾನು ಬಸಿರಾದಾಗ, ತಿನ್ನಲು ಬೇಕು ಬೇಕಾದ್ದನ್ನೆಲ್ಲ ಮಾಡಿ ಹಾಕಿ, ನಮ್ಮ ಎರಡು ಮಕ್ಕಳ ಬಾಣಂತನವನ್ನು ಎಷ್ಟು ಅಚ್ಚುಕಟ್ಟಾಗಿ ಹೆತ್ತ ಅಮ್ಮನಂತೆ ಮಾಡಿ ಕಳಿಸಿರಲಿಲ್ಲವೇ? ಅಮ್ಮನಿಗೆ ನಾನು ಒಂದು ದಿನ ಮಾತಾಡಿಲ್ಲವೆಂದರೆ ಎಷ್ಟೊಂದು ನೊಂದುಕೊಳ್ಳುತ್ತಾರೆ. ಈ ಪರಿಸ್ಥಿತಿಯಲ್ಲಿ ಒಂದು ಹದಿನೈದು ದಿನ ಅಮ್ಮನ ಸೇವೆ ಮಾಡಿ ಬರುತ್ತೇನೆ. ಅಮ್ಮನು ಖುಷಿಯಾಗಿ ಬೇಗ ಗುಣವಾಗುತ್ತಾರೆ.”

ಅವಳ ಅಭಿಪ್ರಾಯವೂ ನನಗೆ ಸಮ್ಮತವೆನಿಸಿತು.

“ಸರಿ, ಹಾಗಾದರೆ ರೆಡಿಯಾಗು. ಬಸ್ ಹತ್ತಿಸಿ ಬರುತ್ತೇನೆ” ಎಂದಾಗ ಖುಷಿಯಿಂದಲೇ ಹೊರಟಳು.

ದಾರಿಯಲ್ಲಿ ಒಂದಿಷ್ಟು ಹಿತೋಪದೇಶಗಳು. ಹೆಂಡತಿ ಮನೆಯಲ್ಲಿ ಇಲ್ಲವೆಂದು ಹೊರಗಡೆ ತಿನ್ನಲು ಹೋಗಬೇಡಿ. ಒಂದು ದಿನ ಬೇಯಿಸಿ ಮೂರು ದಿನ ತಿನ್ನಬೇಡಿ.

ಮಳೆಗಾಲ ಬೇರೆ! ಬಿಸಿನೀರು ಕಾಯಿಸಿ ಕುಡಿಯಿರಿ. ಅಲ್ಲಿ ಸೆಲ್ಫ್ ಮೇಲೆ ಅಮ್ಮ ಕೊಟ್ಟ ಮಿಡಿ ಉಪ್ಪಿನಕಾಯಿ ಇದೆ. ಹಾಕಿ ಊಟ ಮಾಡಿ. ಡ್ರೈವಿಂಗ್ ಮಾಡುವಾಗ ಜಾಗೃತೆ ಇರಲಿ” ಎನ್ನುತ್ತಲೇ ಬಸ್ ಹತ್ತಿದಳು.

ಅಮ್ಮ ಹೆಣ್ಣು ಮಗಳನ್ನು ಹಡೆದಿಲ್ಲವಾದರೂ ಮಗಳಂಥ ಸೊಸೆಯನ್ನು ಪಡೆದ ಅವಳೇ ಧನ್ಯಳು.



**ಜಗದೀಶರಾಂ ಶೆಟ್ಟಿಗಾರ್,**
**ಜಪ್ತಿ, ಕುಂದಾಪುರ**



ಭಾಗ ೧

# ಐ ಯಾಮ್ ಎಕ್ಸ್‌ಪೆಕ್ಟಿಂಗ್...

ಗೀತಾ ಮತ್ತು ಕೇಶವ ಇವರ ಮಗ ಮತ್ತು ಸೊಸೆ ಡೆಲ್ಲಿಯಿಂದ ಒಂದು ವಾರದ ರಜೆಯ ಮೇರೆಗೆ ತುಮಕೂರಿನಲ್ಲಿರುವ ಮನೆಗೆ ಬಂದಿರುತ್ತಾರೆ. ಮದುವೆಯಾಗಿ ಎರಡು ವರ್ಷ ಕಳೆದು ಮನಗೆ ಬಂದ ಮಗ ಮತ್ತು ಸೊಸೆಗೆ ಭರ್ಜರಿ ಅಡುಗೆಯನ್ನು ಮಾಡಿ ಎಲ್ಲರೂ ಒಂದೇ ಟೇಬಲ್ ನಲ್ಲಿ ಕುಳಿತು ರಾತ್ರಿ ಊಟ ಮಾಡುತ್ತಿರುತ್ತಾರೆ. ಸಿಹಿ ಸುದ್ದಿ ತಿಳಿಸಲು ಇದೇ ಒಳ್ಳೆ ಸಮಯವೆಂದು ತಿಳಿದ ಮಗ "ಅಪ್ಪ She is expecting, I mean ನೀವು ತಾತ ಆಗ್ತಾ ಇದ್ದೀರಾ. ಅಮ್ಮ ನೀನು ಅಜ್ಜಿ ಆಗ್ತಾ ಇದ್ದೀಯಾ. ಇವಳಿಗೆ ಈಗ ನಾಲ್ಕು ತಿಂಗಳು. ಇದೇ ವಿಚಾರವಾಗಿ ನಿಮ್ಮೊಂದಿಗೆ ಸಂತೋಷದಿಂದ ಈ ವಿಷಯ ಹೇಳಿ ಸಂಭ್ರಮಿಸಬೇಕೆಂದು ತುಮಕೂರಿಗೆ ಬಂದಿದ್ದು".

ಗೀತಾ: "ತುಂಬಾ ಸಂತೋಷ ಆಯ್ತು ಕಣೋ. ಅಂದಹಾಗೆ ಈ Expecting ಅಂದ್ರೆ ಏನು?"

"ಹಂಗಂದ್ರೆ ಇವಳು ಪ್ರೆಗ್ನೆಂಟ್ ಆಗಿದ್ದಾಳೆ" ಎಂದು ಮಗ ಉತ್ತರಿಸಿದ.

ಮನೆಯಲ್ಲಿ ಎಲ್ಲರೂ ಊಟ ಮಾಡಿ ಸಿಹಿ ಹಂಚಿ ಸಂತಸದಿಂದ ರಾತ್ರಿ ಕಳೆಯುತ್ತಾರೆ.

ಕೇಶವನ ಸ್ನೇಹಿತ ಕೃಷ್ಣಪ್ಪ ಮತ್ತು ಕುಟುಂಬ ಪಕ್ಕದ ಮನೆಯವರಾಗಿದ್ದರು. ಕೃಷ್ಣಪ್ಪ ಮತ್ತು ಪಂಕಜಳ ಮಗಳು ರಾಗಿಣಿ ಈಗಾಗಲೇ MBA ಮುಗಿಸಿ ಬೆಂಗಳೂರಿನಲ್ಲಿರುವ ಪ್ರತಿಷ್ಠಿತ ಕಂಪನಿಗಳಿಗೆ ಕೆಲಸಕ್ಕೆ ಅಪ್ಲೈ ಮಾಡುತ್ತಿದ್ದಳು. ಪಂಕಜ ಮಗಳ ಮೇಲೆ ಬಹಳಷ್ಟು ನಂಬಿಕೆ ಇಟ್ಟಿದ್ದಳು. ತಾನು ಮುಂದೊಂದು ದಿನ ಕೆಲಸಕ್ಕೆ ಸೇರಿ ಮನೆಯ ಕಷ್ಟಗಳನ್ನೆಲ್ಲ ನಿವಾರಿಸುವಂತೆ ಮಾಡುತ್ತಾಳೆ ಎಂದು ನಂಬಿದ್ದಳು. ಕೃಷ್ಣಪ್ಪ ಮತ್ತು ಕೇಶವ ಇಬ್ಬರು ತುಮಕೂರಿನ ಒಂದೇ ಕಂಪನಿಯಲ್ಲಿ ಕೆಲಸ ಮಾಡುತ್ತಿದ್ದರು.

ಕೇಶವನ ಮಗ ಸೊಸೆ ಇಬ್ಬರೂ ರಜೆ ಮುಗಿಸಿ ಡೆಲ್ಲಿಗೆ ಹೋಗಿ ಒಂದು ವಾರ ಕಳೆದಿರುತ್ತದೆ. ರಾಗಿಣಿಗೆ ನೆಲಮಂಗಲದ ಪ್ರತಿಷ್ಠಿತ ಕಂಪನಿಯೊಂದರಲ್ಲಿ ಇಂಟರ್ವ್ಯೂಗೆ ಕರೆ ಬಂದಿರುತ್ತದೆ. ಇಂಟರ್ವ್ಯೂಗೆ ಪೂರ್ವ ತಯಾರಿ ನಡೆಸಿದ ರಾಗಿಣಿ ಬೆಳಿಗ್ಗೆ 10 ಗಂಟೆಗೆ ಬೆಂಗಳೂರಿಗೆ ಹೊರಡುವ ಕೆ.ಎಸ್.ಆರ್.ಟಿ.ಸಿ ಬಸ್ ಹತ್ತಿ ಹೊರಡುತ್ತಾಳೆ. ಬಸ್ಸಿನಲ್ಲಿ ಹೋಗುತ್ತಿರಬೇಕಾದರೆ ಇವಳ ಸ್ನೇಹಿತ ಸುದೀಪನು ಕರೆಮಾಡಿ "ಏನೂ, ಇಂಟರ್ವ್ಯೂಗೆ ರೆಡಿ ನಾ? ಆಲ್ ದಿ ಬೆಸ್ಟ್. ಇಂಟರ್ವ್ಯೂ ಮುಗ್ಸಿ ಮನೆಗೆ ಬರಬೇಕಾದರೆ ಸಿಗ್ತೀನಿ. ಸ್ವೀಟ್ಸ್ ತಗೊಂಡ್ ಬಾ. Again, all the best for your interview." ಎಂದು ಹೇಳಿ ಫೋನ್ ಇಡುತ್ತಾನೆ."

ಮದ್ಯಾಹ್ನ, 3:30ರ ಸಮಯ, ಸುಡು ಬಿಸಿಲು. ರಾಗಿಣಿ ಇಂಟರ್ವ್ಯೂ ಮುಗ್ಸಿ ನೆಲಮಂಗಲ ನಿಲ್ದಾಣದಲ್ಲಿ ಬಸ್ಸಿಗೆ ಕಾಯುತ್ತಿರಬೇಕಾದರೆ ಪಕ್ಕದ ಮನೆಯ ಗೀತಾ ಸಿಗುತ್ತಾರೆ.

ಗೀತಾ: ಓಹ್ ರಾಗಿಣಿ. ಏನ್ ಈ ಕಡೆ? ಎಷ್ಟು ಬಿಸಿಲಲ್ಲಾ.

ರಾಗಿಣಿ: ಆಂಟಿ, ಇವತ್ತು ಒಂದು ಇಂಟರ್ವ್ಯೂ ಇತ್ತು. ಇಲ್ಲೆ ಒಂದು ಕಿಲೋಮೀಟರ್ ದೂರದಲ್ಲಿ. ಬೆಳಗ್ಗೇನೇ ಬಂದಿದ್ದೆ. ಬೆಳಗ್ಗೆಯಿಂದ ಏನೂ ತಿಂದಿರ್ಲಿಲ್ಲ. ಬರ್ತಾ ದಾರಿಯಲ್ಲಿ ಬೇಕರಿ ಇತ್ತು. ಹಾಗೆ ಸ್ವಲ್ಪ ತಿಂಡಿ ತಗೊಂಡು ತಿನ್ಕೊಂಡ್ ಬಂದೆ.

ಗೀತಾ: ಇಂಟರ್ವ್ಯೂ ಹೇಗಾಯ್ತಮ್ಮ?

ರಾಗಿಣಿ: ಚೆನ್ನಾಗಿ ಆಯ್ತು ಆಂಟಿ.

ಇಬ್ಬರು ಮಾತನಾಡುತ್ತಿರಬೇಕಾದರೆ ತುಮಕೂರಿನ ಬಸ್ ಬರುತ್ತದೆ. ಗೀತಾ ಮತ್ತು ರಾಗಿಣಿ ಬಸ್ ಹತ್ತಿ ತಮ್ಮ ಮಾತನ್ನು ಮುಂದುವರಿಸುತ್ತಾರೆ. ರಾಗಿಣಿಗೆ ಸುದೀಪನ ನೆನಪಾಗಿ ಅವನಿಗೆ ಕರೆಮಾಡಲು ಮೊಬೈಲ್ ತೆಗೆಯುತ್ತಾಳೆ.

ರಾಗಿಣಿ: ಇಂಟರ್ವ್ಯೂ ಚೆನ್ನಾಗಿ ಆಯಿತು ಕಣೋ. ಆದ್ರೆ ಬೆಳಗೆ 11 ಗಂಟೆ ಇಂದ 2 ಗಂಟೆ ತನಕ ಕಾಯಿಸಿ ಬಿಟ್ಟರು. ಹಸಿವಾಗ್ತಿತ್ತು. ಆದರೂ ಅವರು ಕೇಳಿದ ಪ್ರಶ್ನೆಗಳಿಗೆ ಸರಿಯಾಗಿ ಉತ್ತರ ಕೊಟ್ಟೆ. ಕೆಲಸ ನನಗೆ ಸಿಗಬಹುದು ಅನ್ನೊ ಕಾನ್ಫಿಡೆನ್ಸ್ ಇದೆ.

ಸುದೀಪ: ಸೂಪರ್! ಕೆಲ್ಸ ಸಿಗೋದು ಗ್ಯಾರೆಂಟಿನಾ? ಆಫರ್ ಲೆಟರ್ ಬೇಗ ಸಿಗುತ್ತೆ ಅನ್ನು?

ರಾಗಿಣಿ: Yes ಸುಧೀ. I am expecting it soon!

"Expecting" ಪದ ಕೇಳುತ್ತಿದ್ದ ಹಾಗೆ ಗೀತಾಳ ಕಿವಿ ನೆಟ್ಟಗಾಯಿತು.

ಸುದೀಪ: ಕಂಗ್ರಾಟ್ಸ್ ರಾಗಿಣಿ. ಕೆಲ್ಸ ಕನ್ಫರ್ಮ್ ಆದ್ಮೇಲೆ ಟ್ರೀಟ್ ಕೊಡ್ಸಬೇಕು. ಓಕೆ ನಾ? ನಾನ್ ನಿಂಗೆ ನಾಳೆ ಸಿಗ್ತೀನಿ. ಇವತ್ತು ಸ್ವಲ್ಪ ಜಾಸ್ತಿ ಕೆಲಸ ಇದೆ. ಆಫರ್ ಲೆಟರ್ ಬಂದ ತಕ್ಷಣ ತಿಳಿಸು.

ರಾಗಿಣಿ: ಷಾರ್ ಶೂರ್. ಬಾಯ್ ಕಣೋ.

ಸುದೀಪ: ಬಾಯ್ ರಾಗಿಣಿ.

ಈ ಕಡೆ ಗೀತಾ ಮನಸಿನಲ್ಲೇ "ಕಾಲ ಕುಲಗೆಟ್ಟು ಹೋಯಿತು. ಮದುವೆ ಆಗಿಲ್ಲ. ಕೆಲಸಕ್ಕೆ ಹೋಗ್ತೀನಿ ಅಂತ ಮನೇಲಿ ಸುಳ್ ಹೇಳಿ ಯಾವನ ಜೊತೇನೋ ಅಲ್ಲೆ ಹೊಡ್ಕೊಂಡು ಈಗ ಪ್ರೆಗ್ನೆಂಟು... ಥೂ... ಥೂ... ರಾಮ ರಾಮಾ...." ತುಮಕೂರು ಬಸ್ ಸ್ಟಾಂಡ್ ನಲ್ಲಿ ಬಸ್ ನಿಲ್ಲಿಸಿದ್ದೇ ತಡ, ಗೀತಾ ಅವಸರವಸರವಾಗಿ ಮನೆ ಕಡೆಗೆ ಹೆಜ್ಜೆ ಹಾಕಿದಳು.

ಇತ್ತ ರಾಗಿಣಿ, "ಆಂಟಿ ಏನೂ ಹೇಳ್ದಿರನೇ ಓಡೋಗ್ತಿದ್ದಾರಲ್ಲಾ? ಏನೋ ಮನೇಲಿ ಅರ್ಜೆಂಟ್ ಇರಬೇಕು" ಅಂದು ಕೊಂಡು ನಿಧಾನವಾಗಿ ಮನೆಯ ಕಡೆಗೆ ಹೊರಟಳು.

ಅಮ್ಮನಿಗೆ ವಿಷಯ ತಿಳಿಸಿದ ರಾಗಿಣಿ, ತಂದೆಯನ್ನು ಕಾಯುತ್ತಿದ್ದಳು. ಸಂಜೆ ಕೃಷ್ಣಪ್ಪ ಮನೆಗೆ ಬಂದ ಕೂಡಲೆ ಇಂಟರ್ವ್ಯೂ ಬಗ್ಗೆ ಹೇಳಿ ಕೆಲಸ ಸಿಗುವ ಭರವಸೆ ಇದೆ ಎಂದಳು.

ಇತ್ತ, ಕೇಶವ ಮನೆಗೆ ಬರುವುದನ್ನೇ ಕಾಯುತ್ತಿದ್ದ ಗೀತಾ ಕೇಶವ ಬಂದ ಕೂಡಲೇ "ರೀ. ಪಕ್ಕದ್ಮನೆ ಪಂಕಜ ಮಗಳಿಗೆ ಹೊಟ್ಟೆ ತುಂಬಿದೆ."

ಕೇಶವ: ನಮ್ ಮನೇಲಿ ಊಟ ಮಾಡಿದ್ಲಾ? ಸೋಡ ಜಾಸ್ತಿ ಹಾಕಿದ್ಯ? ಏನಾಯ್ತು?

ಗೀತಾ: ನೀವ್ ಒಳ್ಳೆ. ಸುಮ್ನೆ ಕೇಳ್ರಿ. ಇವತ್ತು ನೆಲಮಂಗಲದಿಂದ ಬರ್ತಿರಬೇಕಾದ್ರೆ ರಾಗಿಣಿ ಸಿಕ್ಕಿದ್ಲು, ಫೋನ್ ನಲ್ಲಿ ಅವಳ ಬಾಯ್ ಫ್ರೆಂಡ್ ಜೊತೆಗೆ ಮಾತಾಡ್ತಿರಬೇಕಾದ್ರೆ ತಾನು ಪ್ರೆಗ್ನೆಂಟ್ ಎಂದು ಹೇಳ್ತಿದ್ದಿದ್ದು ನನ್ ಕಿವಿಗೆ ಬಿತ್ತು.

ಕೇಶವ: ಹೇ ಬೇರೇನೋ ಇರಬೇಕು ಕಣೆ. ಸುಮ್ನೆ ಬಿಡು ಈ ವಿಷ್ಯ.

ಗೀತಾ: ನನ್ ಜೊತೆಗೇನೆ ನಿಂತಿದ್ಲು ರೀ. ಬಾಯ್ ಫ್ರೆಂಡ್ ಯಾರೊ ಸುದೀಪ್ ಅಂತ

ಅವನ್ ಜೊತೆ ಮಾತಾಡ್ತಿದ್ಲು. ಪ್ರೆಗ್ನೆಂಟ್ ಆಗಿದ್ದೀನಿ, ಅಂತೆಲ್ಲ ಏನೇನೊ ಹೇಳ್ತಿದ್ಲು. ಅದು ಬೇರೆ ಸುಸ್ತಾಗ್ತಿತ್ತಂತೆ. ಅದಕ್ಕೆ ಬೇಕರಿಲಿ ಏನೇನೋ ತಿನ್ಕೊಂಡ್ ಬಂದ್ಲಂತೆ. ಇದನ್ನೆಲ್ಲಾ ಅವನ ಜೊತೆ ಹೇಳ್ತಿದ್ಲು.

ಕೇಶವ: ಇರಲಿ ಬಿಡು. ನಾಳೆ ಕೃಷ್ಣಪ್ಪ ಜೊತೆ ಮಾತಾಡ್ತೀನಿ.

ಗೀತಾ: ಬೇಡ ಬಿಡ್ರಿ. ನಿಮಗ್ಯಾಕೆ ಅವ್ರ ಉಸಾಬರಿ.

ಕೇಶವ: ಆಯಿತು ಬಿಡು ಈಗ.

ಮರುದಿನ ಮಧ್ಯಾಹ್ನ ಊಟದ ಸಮಯದಲ್ಲಿ ಕೇಶವ ಕೃಷ್ಣಪ್ಪನ ಡೆಸ್ಕ್ ಗೆ ಬಂದು,

ಕೇಶವ: ಕೃಷ್ಣ, ಒಂದ್ ತುಂಬ ಸೆನ್ಸಿಟಿವ್ ವಿಷ್ಯ ಇತ್ತು ಕಣೋ. ಫ್ರೀ ಇದ್ಯಾ ಬಾ ಹೊರಗೆ ಟೀ ಕುಡ್ಕೊಂಡು ಮಾತಾಡೋಣ

ಕೃಷ್ಣಪ್ಪ: ಆಯಿತು ಬಾ. ಊಟ ಮಾಡಿದ್ಮೇಲೆ ಬ್ಲಾಕ್ ಟೀ ಚೆನ್ನಾಗಿರುತ್ತೆ.

ಕೇಶವ: Actually, ನಿಮ್ ಮನೆದೆ ವಿಷ್ಯ ಕಣೋ. ಹೇಗೆ ಹೇಳೋದು ಗೊತ್ತಾಗ್ತಿಲ್ಲ. ನೀನು ಕೋಪ ಮಾಡ್ಕೋಳ್ಬೇಡ. ಸಮಾಧಾನದಿಂದ ಕೇಳು. ಏನೇ ಹೆಲ್ಪ್ ಬೇಕಿದ್ರು ಕೇಳು. ಒಟ್ಟಿಗೆ ಸಾಲ್ವ್ ಮಾಡೋಣ.

ಕೃಷ್ಣಪ್ಪ: ವಿಷ್ಯ ಏನ್ ಅಂತ ಹೇಳೋ ಮೊದಲು.

ಕೇಶವ: ನಿನ್ನೆ ಇವಳಿಗೆ ನೆಲಮಂಗಲದಿಂದ ಬರ್ತಾ ರಾಗಿಣಿ ಸಿಕ್ಕಿದ್ಲಂತೆ. ಬಸ್ಸಿನಲ್ಲಿ ಮಾತಾಡ್ತಿರಬೇಕಾದ್ರೆ, ರಾಗಿಣಿ ಫ್ರೆಂಡ್ ಕಾಲ್ ಮಾಡಿದನಂತೆ. ರಾಗಿಣಿ ಗುಟ್ಟಾಗಿ ತಾನು ಪ್ರೆಗ್ನೆಂಟ್ ಆಗಿದೀನಿ ಅಂತ ಹೇಳ್ತಿದ್ಲಂತೆ. ಮೊದಲೇ ಗೊತ್ತಲ್ಲ ಇವಳು ಮೈಕ್ ಸೆಟ್ ಅಂತ ಕಿವಿಗೆ ಬಿದ್ದಿದ್ದೇ ತಡ ನಾನ್ ಮನೆಗೆ ಬರೋತನಕ ಕಾದು, ರಾತ್ರಿ ಹೇಳಿದ್ಲು. ಅದಕ್ಕೆ ಸುಮ್ನೆ ಇರು ಯಾರಿಗೂ ಏನೂ ಹೇಳ್ಬೇಡ. ನಾನು ಕೃಷ್ಣಪ್ಪನೊಂದಿಗೆ ಮಾತಾಡ್ತೀನಿ ಅಂತ ಹೇಳಿದ್ದೆ.

ಕೃಷ್ಣಪ್ಪ ಮುಖದಲ್ಲಿ ಕೋಪ ಮತ್ತು ದುಃಖ ತುಂಬಿತು. ಒಂದೂ ಮಾತು ಮಾತನಾಡದೆ ಟೀ ಕುಡಿದು ಆಫೀಸ್ ಗೆ ಕೃಷ್ಣಪ್ಪ ಬಂದನು. ಇವನ ಹಿಂದೆ ಕೇಶವ ಸಹ ಹಿಂದಿರುಗಿದ.

ಸಂಜೆ ಮನೆಗೆ ಬಂದ ಕೃಷ್ಣಪ್ಪ ಹೆಂಡತಿಯೊಂದಿಗೆ ಕುಳಿತು "ರಾಗಿಣಿ ಪ್ರೆಗ್ನೆಂಟ್ ಅಂತೆ. ಅವಳ ಕ್ಲಾಸ್ಮೇಟ್ ಸುದೀಪ ಅಂತೆ."

ಪಂಕಜ: ಏನ್ರಿ ಹೇಳ್ತಿದ್ದೀರಾ? ಇವಳು ಯಾಕೆ ಹೀಗೆ ಮಾಡ್ತಾಳೆ. ನಿಮಗೆ ಯಾರು ಹೇಳಿದ್ದು?

ಪಂಕಜ ಗಂಡನ ಮಾತಿಗೆ ಪ್ರಶ್ನೆಗಳನ್ನು ಕೇಳುತ್ತಿದ್ದಂತೆ ದು:ಖದಿಂದ ಕಣ್ಣೀರು ತುಂಬಿ ಹರಿಯುತ್ತೆ.

ಕೃಷ್ಣಪ್ಪ ಹೆಂಡತಿಯನ್ನು ಸಮಾಧಾನ ಮಾಡಿ. "ಇದಕ್ಕೆ ಪರಿಹಾರ ಹುಡುಕೋಣ. ರಾಗಿಣಿಯೊಂದಿಗೆ ಮಾತಾಡೊಣ." ಎಂದು ಹಾಲ್ ಗೆ ಬಂದು ಜೋರು ಧ್ವನಿಯಲ್ಲಿ "ರಾಗಿಣಿ" ಎಂದು ಕರೆದ. ರಾಗಿಣಿ ತನ್ನೆಲ್ಲಾ ಕೆಲಸವನ್ನು ಬಿಟ್ಟು ಕೋಣೆಯಿಂದ ಓಡಿ ಬಂದಳು. ಕೃಷ್ಣಪ್ಪ ಹಾಲ್ ನಲ್ಲಿ ಇದ್ದ ಸೋಫಾದ ಮೇಲೆ ಕುಳಿತ.

ಕೃಷ್ಣಪ್ಪ: ಏನ್ ವಿಷ್ಯ ರಾಗಿಣಿ. ಏನಾದ್ರೂ ಪ್ರಾಬ್ಲೆಮ್ ಆಗಿದ್ಯಾ?

ರಾಗಿಣಿ: ಇಲ್ಲಪ್ಪ ಯಾಕೆ? ಇವತ್ತು ಅಥವಾ ನಾಳೆ ಸಂಜೆ ಅಷ್ಟರಲ್ಲಿ ಕೆಲ್ಸ ಕನ್ಫರ್ಮ್ ಆಗೋ ಸುದ್ದಿ ಬರುತ್ತೆ ಅಂತ ಕಾಯ್ತಿದ್ದೀನಿ.

ಕೃಷ್ಣಪ್ಪ: ಯಾರು ನಿನ್ನ ಆ ಬಾಯ್ ಫ್ರೆಂಡ್? ಕರ್ಕೊಂಡ್ ಬಾ ಮನೆಗೆ. ಮಾತಾಡೋಣ.

ದಿಗ್ಭ್ರಾಂತಳಾದ ರಾಗಿಣಿ ಏನು ಮಾತಾನಾಡಬೇಕೆಂದು ತಿಳಿಯದೆ "ಯಾರೂ ಬಾಯ್ ಫ್ರೆಂಡ್ ಇಲ್ಲಪ್ಪ" ಎಂದು ಹೇಳಿದಳು.

ಕೃಷ್ಣಪ್ಪ: ಮತ್ತೇ, ಮೂರ್ಹೊತ್ತು ನಿನ್ನ ಕ್ಲಾಸ್ಮೇಟ್ ಸುದೀಪನೊಂದಿಗೆ ಮಾತಾಡ್ತೀರ್ತೀಯ. ಫ್ರೆಂಡು ಫ್ರೆಂಡು ಅನ್ಕೊಂಡ್ ಸುಮ್ನೆ ಇದ್ವಿ. ಈಗ ನಮಗೆ ಒಳ್ಳೆ ಗಿಫ್ಟ್ ಕೊಟ್ಟಿದ್ದೀಯ ನೀನು. ಅವನ್ನ ಈಗ್ಲೆ ಕರ್ಸು.

ರಾಗಿಣಿ: ಅಲ್ಲಪ್ಪ, ಸುದೀಪ ಈಸ್ ಜಸ್ಟ್ ಎ ಫ್ರೆಂಡ್ ಅಪ್ಪ.

ಕೃಷ್ಣಪ್ಪ: ಈಗ ಕರಿಸ್ತಿಯೋ? ಇಲ್ಲವ್ರೋ? ನಾನೆ ಕಾಲ್ ಮಾಡ್ಲಾ?

ರಾಗಿಣಿ ಕರೆ ಮಾಡಿ ಸುದೀಪನನ್ನು ಈ ಕೂಡಲೆ ಮನೆಗೆ ಬರಲು ಹೇಳುತ್ತಾಳೆ. ಸುದೀಪ ಮನೆಗೆ ಬರುವ ವರೆಗೆ ಮನೆಯಲ್ಲಿ ನೀರವ ಮೌನ ಆವರಿಸಿರುತ್ತದೆ. ಕೋಣೆಯಲ್ಲಿ ಒಬ್ಬಳೆ ಕುಳಿತು "ನನಗೆ ಸುದೀಪ ಅಂದರೆ ಇಷ್ಟ. ಆದರೆ ಈ ವಿಷ್ಯ ನಾನು ಸುದೀಪನಿಗೂ ಹೇಳಿಲ್ಲ. ಯಾರಿಗೂ ಗೊತ್ತೂ ಇಲ್ಲ. ಹೇಗೆ ಈ ವಿಷ್ಯ ಗೊತ್ತಾಯಿತು. ಅಪ್ಪನಿಗೆ ಯಾರೊ ಏನೊ ನಮ್ಮಿಬ್ಬರ ಬಗ್ಗೆ ಇಲ್ಲ ಸಲ್ಲದ್ದು ಹೇಳಿರ್ಬೇಕು." ಕಲ್ಪನೆ ಮಾಡಿಕೊಂಡು ರಾಗಿಣಿಯ ಮನಸ್ಸಿನಲ್ಲಿ ತಳಮಳವಾಗುತ್ತಿತ್ತು.

"ಇವಳು ಯಾಕೆ ಹೀಗಾದಳು? ಮನೆ ಬೆಳಗುತ್ತಾಳೆ ಅಂದುಕೊಂಡಿದ್ದೆ. ಮಾನ ಮರ್ಯಾದೆ ಮೂರು ಕಾಸಿಗೆ ಹರಾಜ್ ಹಾಕ್ಬಿಟ್ಲು." ಎಂದು ಪಂಕಜ ಮನಸ್ಸಿನಲ್ಲೆ ಅಂದುಕೊಳ್ಳುತ್ತ ಜೀವನದ ಮೇಲೆ ಅಸಹ್ಯ ಪಡುತ್ತಿರಬೇಕಾದರೆ, ಸುದೀಪನು ಮನೆ ಬಾಗಿಲ ಹತ್ತಿರ ಬಂದು "ರಾಗಿಣಿ" ಎಂದು ಕೂಗುತ್ತಾನೆ. ರಾಗಿಣಿ ಕೋಣೆಯಿಂದ ಓಡಿ ಬರುವಷ್ಟರಲ್ಲಿ ಕೃಷ್ಣಪ್ಪ ಅವನ ಮುಖ ಒಮ್ಮೆ ನೋಡಿ ಮಗಳ ಕಡೆ ನೋಡುತ್ತಾರೆ. "ಒಳಗೆ ಬಾ, ಕೂತ್ಕೊ. ಎಷ್ಟು ತಿಂಗಳ ಈ ನಿಮ್ಮಿಬ್ಬರ ಸಂಬಂಧ?" ಎಂದು ಗಟ್ಟಿ ಧ್ವನಿಯಲ್ಲಿ ಕೇಳುತ್ತಾರೆ.

ಸುದೀಪ: ಅಂಕಲ್, ನಾವು ಡಿಗ್ರಿ ಕ್ಲಾಸ್ ಮೇಟ್ಸ್. ಸುಮಾರು 5 ವರ್ಷದಿಂದ ಪರಿಚಯ. ರಾಗಿಣಿ ಹೇಳಿರ್ಬೇಕಲ್ಲ ಅಂಕಲ್?

ಕೃಷ್ಣಪ್ಪ: ಗೊತ್ತು. ಆದರೆ ಈ ವಿಷ್ಯ ಗೊತ್ತಿರ್ಲಿಲ್ಲ. ನಿಮ್ಮ ಅಪ್ಪ ಅಮ್ಮನಿಗೂ ಈ ವಿಷಯ ಗೊತ್ತಿಲ್ಲ ಅನ್ಸುತ್ತೆ

ಸುದೀಪ: ಗೊತ್ತಿದೆ ಅಂಕಲ್. ರಾಗಿಣಿ ಲಾಸ್ಟ್ ಸೆಮಿಸ್ಟರ್ ನಲ್ಲಿ ನನ್ನ ಎಕ್ಸಾಮ್ಸ್ ಗೆ ತುಂಬ ಹೆಲ್ಪ್ ಮಾಡಿದ್ಲು. ಅಮ್ಮನಿಗೆ ಹೇಳಿದ್ದೆ. ಇವಳಿಂದಾನೇ ನನಗೆ ಒಳ್ಳೆ ಮಾರ್ಕ್ಸ್ ಬಂದಿದ್ದು ಅಂತ.

ಕೃಷ್ಣಪ್ಪ: ಓಹ್. ಹಾಗಾದ್ರೆ ನಿಮ್ಮ ಮನೇಲಿ ಗೊತ್ತಿದ್ದೆ ಎಲ್ಲಾ ಕಾರ್ಯಕ್ರಮ ಮಾಡಿದ್ದಾ?

ಸುದೀಪ: ಕಾರ್ಯಕ್ರಮನ? ಓಹ್ ಅದಾ. ನಾನು 80% ಮೇಲೆ ಮಾರ್ಕ್ಸ್ ಬಂದರೆ ಪಾರ್ಟಿ ಕೊಡಿಸ್ತಿನಿ ಅಂತ ಹೇಳಿದ್ದೆ. ರಾಗಿಣಿನು 90% ತೆಗೆದ್ದಿದ್ಲು. ನಮ್ಮ ಮನೇಲೆ ತ್ರೀ ಮಂತ್ಸ್ ಬ್ಯಾಕ್ ಪಾರ್ಟಿ ಮಾಡಿದ್ವಿ.

ಸುದೀಪ ಆಡುತ್ತಿರುವ ಮಾತುಗಳನ್ನು ಕೇಳಿ ಪಂಕಜಳ ಪಿತ್ತ ನೆತ್ತಿಗೇರುತ್ತೆ.

ಪಂಕಜ: ಏಯ್. ನನ್ನ ಮಗಳು ಪಾಠ ಹೇಳಿ ಕೊಟ್ಟಿದ್ದಕ್ಕೆ ಇದೇನ ಗುರುದಕ್ಷಿಣೆ ಕೊಡೋದು?

ಎಂದು ಜೋರಾಗಿ ದುಃಖ ಉಮ್ಮಳಿಸಿ ಬಂದು ಅಳತೊಡಗಿದರು ಪಂಕಜ.

ಇದನ್ನು ಕಂಡ ರಾಗಿಣಿ ಅಮ್ಮನ ಹತ್ತಿರ ಬಂದು ಮಾತಾಡಲು ಬಾಯಿ ತೆಗೆಯುವಷ್ಟರಲ್ಲಿ ಪಟ್ ಅಂತ ಪಂಕಜ, ರಾಗಿಣಿಯ ಕೆನ್ನೆಗೆ ಕಪಾಳಮೋಕ್ಷ ಮಾಡಿ ಮತ್ತೆ ಜೋರಾಗಿ ಅಳುತ್ತಾರೆ. ಅಮ್ಮನ ಮುಖ ನೋಡಿ ರಾಗಿಣಿಯು ದುಃಖಿತಳಾಗುತ್ತಾಳೆ.

*(ಮುಂದಿನ ಸಂಚಿಕೆಯಲ್ಲಿ ಮುಂದುವರಿಯುತ್ತದೆ)......*



**ಯಶಸ್ವಿ ಜೆ**
**ಜ್ಞಾನಭಾರತಿ**
**ಬೆಂಗಳೂರು**


6ನೆ ಜುಲೈ ರಂದು ನಡೆದ
ಸಾಮೂಹಿಕ
ಶ್ರೀ ಸತ್ಯನಾರಾಯಣ ಪೂಜೆ
27ನೆ ಜುಲೈ 2025
ಯು.ಸಿ.ಪಿ.ಇ ಕ್ರೀಡಾಂಗಣದಲ್ಲಿ ನಡೆದ
ವಾರ್ಷಿಕ ಕ್ರೀಡಾ ಕೂಟ 2025

# ಶೆಟ್ಟಿಗಾರ ವಾಣಿ

## ಸಮಾಜ ಬಾಂಧವರ ಅವಗಾಹನೆಗಾಗಿ

- ಸಮಾಜದಲ್ಲಿರುವ ಸಾಹಿತ್ಯ ರಂಗದ ಪ್ರತಿಭೆಗಳನ್ನು ಪ್ರೋತ್ಸಾಹಿಸುವ ಉದ್ದೇಶ ಹೊಂದಿರುವ **ಶೆಟ್ಟಿಗಾರ ವಾಣಿ** ತನ್ನ ಪ್ರಕಟಣೆಯನ್ನು ಪ್ರಾರಂಭಿಸಿ ಪ್ರಗತಿ ಪಥದಲ್ಲಿದ್ದು ಸಮಾಜ ಬಾಂಧವರ ಮೆಚ್ಚುಗೆಗೆ ಪಾತ್ರವಾಗಿದೆ.
- ಸಮಾಜ ಬಾಂಧವರು ಬರೆದಿರುವ ಕಥೆ, ಕವನ, ಪ್ರಬಂಧ, ಪ್ರವಾಸ ಕಥನಗಳು, ವೈಚಾರಿಕ ಲೇಖನಗಳು, ವೃತ್ತಿ ಮತ್ತು ಜೀವನ ಅನುಭವ ಗಾಥೆಗಳು, ನಗೆ ಬರಹಗಳು, ವ್ಯಂಗ್ಯ ಮತ್ತು ರೇಖಾಚಿತ್ರಗಳು ಮೊದಲಾದ ವಿಭಿನ್ನ ಸಾಹಿತ್ಯ ಕೃತಿಗಳನ್ನು ಸ್ವೀಕರಿಸಲಾಗುವುದು.
- ಆಯ್ಕೆಯಾದ ಬರಹಗಳನ್ನು ಪತ್ರಿಕೆಯ ಮುಂದಿನ ಸಂಚಿಕೆಗಳಲ್ಲಿ ಪ್ರಕಟಿಸಲಾಗುವುದು.
- ಬರಹಗಳ ಆಯ್ಕೆ ಮತ್ತು ಪ್ರಕಟಣೆಯ ವಿಷಯದಲ್ಲಿ ಪತ್ರಿಕೆಯ ತೀರ್ಮಾನವೇ ಅಂತಿಮವಾಗಿರುತ್ತದೆ.
- ಲೇಖಕರು ತಮ್ಮ ಹೆಸರು, ವಿಳಾಸ, ಭಾವಚಿತ್ರ ಮತ್ತು ಕಿರು ಪರಿಚಯವನ್ನು ಲೇಖನದೊಂದಿಗೆ ನಮೂದಿಸಬೇಕು.
- ಪತ್ರಿಕೆಯ ಸರ್ವಾಂಗೀಣ ಪ್ರಗತಿಗೆ ಸಲಹೆ ಸೂಚನೆಗಳನ್ನು ಸಾದರದಿಂದ ಸ್ವೀಕರಿಸಲಾಗುವುದು.

**ಆಸಕ್ತರು ತಮ್ಮ ಬರಹಗಳನ್ನು (WORD FILE) ಇಮೇಲ್ ಮೂಲಕ ಕೆಳಕಂಡ ಇಮೇಲ್ ವಿಳಾಸಕ್ಕೆ ಕಳುಹಿಸಿಕೊಡಬೇಕಾಗಿ ವಿನಂತಿಸಲಾಗಿದೆ (ಹೆಚ್ಚಿನ ಮಾಹಿತಿ, ವಿವರ ಮತ್ತು ನಿಮ್ಮ ಅನಿಸಿಕೆಗಳಿಗೆ ಸಂಪರ್ಕಿಸಿ):**

**shettigaravani@gmail.com**
ವಾಟ್ಸಪ್ ನಂ. 9845660131

ಪತ್ರಿಕೆಯ ಓದುಗರು ತಮ್ಮ ಅನಿಸಿಕೆ ಮತ್ತು ಸಲಹೆಗಳನ್ನು ಕೆಳಕಂಡ ಇಮೇಲ್ ವಿಳಾಸಕ್ಕೆ ಕಳುಹಿಸಬೇಕಾಗಿ ಕೋರಿಕೆ:

**shettigaravani@gmail.com • Mob. No. 9845660131**

## **ಶೆಟ್ಟಿಗಾರವಾಣಿ**ಯ ಮೊದಲ ಸಂಪುಟದ ಎಲ್ಲಾ **12 ಸಂಚಿಕೆಗಳು** ಕೂಟದ ವೆಬ್ಸೈಟ್‌ನಲ್ಲಿ ಡೌನ್ ಲೋಡ್ ಮಾಡಿ ಓದಬಹುದು.

**www.dkpadmashalibng.in/shettigaravani**

June 2025


May 2025


April 2025


March 2025


February 2025


January 2025


December 2024


November 2024


October 2024


September 2024


August 2024


July 2024


ಮೇಲಿರುವ ಪತ್ರಿಕೆಯ ಚಿತ್ರವನ್ನು ಒತ್ತಿದರೆ ಸಂಚಿಕೆ ಡೌನ್ ಲೋಡ್ ಆಗುವುದು.